# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038







ಸಂಪುಟ:02 • ಸಂಚಿಕೆ: 79 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 20.09.2024 • ಶುಕ್ರವಾರ • ಪುಟ:04 • ಬೆಲೆ:2
Volume:02 • Issue: 79 • PRGI No:KARKAN/2023/88055 • VIJAYANAGARA • 20.09.2024 • Friday • Page:04 • Rs:2



ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿಗಾಗಿ
ಹಂಪಿ ಟೈಮ್ಸ್ ದಿನಪತ್ರಿಕೆ ಓದಿರಿ
ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
94486 33038


## ಬಡ ರೈತರಿಗೆ ಪಟ್ಟಾ ನೀಡಿ

### ಎಐಕೆಎಸ್ ಸಂಯೋಜಿತ ಕರ್ನಾಟಕ ಪ್ರಾಂತ ರೈತ ಸಂಘ ಒತ್ತಾಯ



**■ ಹಂಪಿ ಟೈಮ್ಸ್ ಹೊಸಪೇಟೆ**

ತಾಲೂಕು ಜಂಬುನಾಥ ಹಳ್ಳಿ 114ರಲ್ಲಿ ಮತ್ತು ಸಂಕ್ಲಾಪುರ 185 ಸರ್ವೆ ನಂಬರ್ ಗಳಲ್ಲಿ ಹಲವಾರು ವರ್ಷಗಳಿಂದ ಸಾಗುವಳಿ ಕೈಬರಹ ಪಹಣಿ, ತೆರಿಗೆ ಕಟ್ಟಿದ ರಶೀದಿ ಹೊಂದಿರುವ ಎಸ್ಸಿ, ಎಸ್ಟಿ, ಒಬಿಸಿ ಬಡ ರೈತರಿಗೆ ಪಟ್ಟಾ ನೀಡಬೇಕೆಂದು ಆಗ್ರಹಿಸಿ ಎಐಕೆಎಸ್ ಸಂಯೋಜಿತ ಕರ್ನಾಟಕ ಪ್ರಾಂತ ರೈತ ಸಂಘ ಗುರುವಾರ ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿತು.

ಸಂಘಟನೆಯ ತಾಲೂಕು ಸಂಚಾಲಕ ಎನ್ ಯಲ್ಲಾಲಿಂಗ ಮಾತನಾಡಿ, ನೂರಾರು ಕುಟುಂಬಗಳು ಈ ಭೂಮಿಗಳೇ ಜೀವನಾಧಾರವೆಂಬಂತೆ ಸಾಗುವಳಿ ಮಾಡುತ್ತಾ ಬಂದಿರುತ್ತಾರೆ. ಈಜಮೀನುಗಳನ್ನು ಉಳುಮೆ ಮಾಡಿರುವ ಸಾಕ್ಷಿಯಾಗಿ ಕಂದಾಯ ಇಲಾಖೆ ನೀಡಿರುವ ಹಲವಾರು ವರ್ಷಗಳ ಕೈಬರಹ ಪಹಣಿಗಳನ್ನು >>4

## ವಾಲಿದ ಬಸ್ ನಿಲ್ದಾಣ

### ಪ್ರಾಣ ಬಲಿಗಾಗಿ ಕಾಯುತ್ತಿರುವ ತುಂಗಭದ್ರಾ ಬಸ್ ಶೆಲ್ಟರ್

### ಸೆ.22 ರಂದು ಟಿ.ಬಿ.ಡ್ಯಾಂಗೆ ಸಿಎಂ ಸಿದ್ದರಾಮಯ್ಯ ಅಗಮನ




**■ ಹಂಪಿ ಟೈಮ್ಸ್ ಹೊಸಪೇಟೆ**

ನಗರದ ತುಂಗಭದ್ರಾ ಜಲಾಶಯ ಟಿಬಿಡ್ಯಾಂ ವೃತ್ತದ ಬಳಿ ಬಳಿ ಪ್ರಯಾಣಿಕರಿಗಾಗಿ ನಿರ್ಮಾಣ ಮಾಡಲಾದ ತುಂಗಭದ್ರಾ ಬಸ್ ನಿಲ್ದಾಣ ನಿರ್ವಹಣೆ ಕೊರತೆಯಿಂದ ವಾಲಿದ್ದು, ಯಾವುದೇ ಕ್ಷಣದಲ್ಲಿ ನೆಲಕ್ಕುರುಳುವ ಸಾಧ್ಯತೆ ಇದ್ದು, ಪ್ರಯಾಣಿಕರ ಸುರಕ್ಷತೆ ದೃಷ್ಟಯಿಂದಾಗಿ ಸಂಬಂಧಿಸಿದ ಅಧಿಕಾರಿಗಳು ಕೂಡಲೇ ಗಮನಹರಿಸಿ, ಭವಷ್ಯದಲ್ಲಿ ಎದುರಾಗಬಹುದಾದ ಅವಘಡಗಳನ್ನು ತಪ್ಪಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ನಗರದಲ್ಲಿ ನಗರಸಾರಿಗೆ ಬಸ್‌ಗಳ ಸಂಚಾರ ಆರಂಭಿಸಿದಾಗ ಪ್ರಯಾಣಿಕರ ಅನುಕೂಲಕ್ಕಾಗಿ ನಿರ್ಮಿಸಿದ ತುಂಗಭದ್ರಾ ಬಸ್ ನಿಲ್ದಾಣ ಶಿಥಿಲಗೊಂಡಿದ್ದು, ಗಾಳಿ ಮಳೆಗೆ ಬಾಗಿ ನಿಂತಿದೆ. ಪ್ರಯಾಣಿಕರ ಸುರಕ್ಷತೆಯತ್ತ ಗಮನಹರಿಸಬೇಕಾದ ಸಂಬಂಧಿಸಿದ ಅಧಿಕಾರಿಗಳಿಗೆ ನಿಲ್ದಾಣದ ಸ್ಥಿತಿ ಕಣ್ಣಿಗೆ ಕಂಡು ಸುಮ್ಮನಿದ್ದಾರೋ, ಅಥವಾ ಇದರತ್ತ ಕಣ್ಣಾಯಿಸಿಲ್ಲವೋ ಎಂಬುದು ತಿಳಿಯದಂತಾಗಿದೆ. ಸೆ.22 ರಂದು ಸಿಎಂ ಸಿದ್ದರಾಮಯ್ಯನವರು ತುಂಗಭದ್ರಾ ಜಲಾಶಯಕ್ಕೆ ಬಾಗಿನ ಅರ್ಪಿಸಲು ಬರುತ್ತಿದ್ದಾರೆ. ಅಪಾರ ಅಭಿಮಾನಿಗಳನ್ನು ಹೊಂದಿರುವ ಸಿಎಂ ಸಿದ್ದರಾಮಯ್ಯನವರನ್ನು ನೋಡಲು ಜನರು ನಾನಕಡೆಗಳಿದ ಆಗಮಿಸಲಿದ್ದಾರೆ. ಆಕಸ್ಮಿಕ ಮಳೆಗೆ ಆಶ್ರಯ ಪಡೆಯಲು ಹೋದವರ ಗತಿ ಏನಾಗುತ್ತದೆ ಎಂಬ ಭಯ ಜನರನ್ನು ಕಾಡುತ್ತಿದೆ. ಹಂಪಿ ವೀಕ್ಷಣೆಗೆ ಆಗಮಿಸುವ ದೇಶ, ವಿದೇಶಿ ಪ್ರವಾಸಿಗರು ತುಂಗಭದ್ರಾ ಜಲಾಶಯಕ್ಕೂ ಭೇಟಿ ನೀಡುತ್ತಾರೆ. ಪ್ರವಾಸಿ ತಾಣಗಳ ಬಳಿಯೇ ಬಸ್ ನಿಲ್ದಾಣ ದುಸ್ಥಿತಿ ತಲುಪಿರುವುದನ್ನು ಅಧಿಕಾರಿಗಳೇಕೆ ಗಮನಹರಿಸುತ್ತಿಲ್ಲ ಎಂಬ ಪ್ರಶ್ನೆ ಜನರದ್ದಾಗಿದ್ದು, ಸಂಬಂಧಿಸಿದ ಅಧಿಕಾರಿಗಳು ಇನ್ನಾದರೂ ಇತ್ತಕಡೆ ಗಮನಹರಿಸುವರೇ ಕಾದು ನೋಡಬೇಕು.

## ಮೈಕ್ರೋ ನ್ಯೂಸ್

### ಕಟ್ಟಡ ಕಾರ್ಮಿಕರಿಗೆ ಟೂಲ್‌ಕಿಟ್ ವಿತರಣೆ; ನೋಂದಣಿಗೆ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ವಿವಿಧ ಟೂಲ್‌ಕಿಟ್ ವಿತರಿಸಲು ಉದ್ದೇಶಿಸಲಾಗಿದ್ದು, >>3

### ಸೆ.21ಕ್ಕೆ ತಿಂಗಳ ಸೊಬಗು ಸಾಂಸ್ಕೃತಿಕ ಕಾರ್ಯಕ್ರಮ

**ಹಂಪಿ ಟೈಮ್ಸ್ ಬಳ್ಳಾರಿ**

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗು ಸಾಂಸ್ಕೃತಿಕ ಸಮುಚ್ಚಯ ನಿರ್ವಹಣಾ ಸಮಿತಿ ವತಿಯಿಂದ “ತಿಂಗಳ ಸೊಬಗು” ಸಾಂಸ್ಕೃತಿಕ ಕಾರ್ಯಕ್ರಮವನ್ನು ಸೆ.21 ರಂದು >>4

### ವಿದ್ಯಾರ್ಥಿ ಪ್ರೋತ್ಸಾಹ ಧನಕ್ಕಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮ ಮತ್ತು ಪ್ರೋತ್ಸಾಹಧನ ಕಾರ್ಯಕ್ರಮಗಳಡಿ >>3

## ಕ.ಸಾ.ಪ ತಾಲೂಕಧ್ಯಕ್ಷರಾಗಿ ಡಾ. ಗುಂಡಿ ಮಾರುತಿ ನೇಮಕ

**■ ಹಂಪಿ ಟೈಮ್ಸ್ ಹೊಸಪೇಟೆ**



ಹೊಸಪೇಟೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷರಾಗಿ ಡಾ.ಗುಂಡಿ ಮಾರುತಿ ನೇಮಕಗೊಂಡಿದ್ದಾರೆ

ಕನ್ನಡ ಸಾಹಿತ್ಯ ಪರಿಷತ್ತು, ಹೊಸಪೇಟೆ ತಾಲ್ಲೂಕು ಘಟಕದ ಅಧ್ಯಕ್ಷರಾಗಿ ಸೇವೆಸಲ್ಲಿ ಸುತ್ತಿದ್ದ ಡಾ. ನಾಯಕರ ಹುಲಗಪ್ಪ ಅವರು ಗೋಟಗೋಡಿಯ ಜನಪದ ವಿಶ್ವವಿದ್ಯಾಲಯ ದಲ್ಲಿ ಸೇವೆಸಲ್ಲಿಸಲು ನಿಯುಕ್ತಿಗೊಂಡಿರುವುದರಿಂದ ಅವರು ರಾಜೀನಾಮೆಯನ್ನು ನೀಡಿರುತ್ತಾರೆ. ಅವರ ರಾಜೀನಾಮೆಯನ್ನು ಅಂಗೀಕರಿಸಿ, ತೆರವಾಗಿ ರುವ ಕನ್ನಡ ಸಾಹಿತ್ಯ ಪರಿಷತ್ತು, ಹೊಸಪೇಟೆ ತಾಲ್ಲೂಕು ಘಟಕದ ಅಧ್ಯಕ್ಷ ಸ್ಥಾನಕ್ಕೆ ಡಾ.ಗುಂಡಿ ಮಾರುತಿ ಅವರನ್ನು ನೇಮಕ ಮಾಡಲಾಗಿದೆ. ತಾಲ್ಲೂಕಿನಲ್ಲಿ ಪರಿಷತ್ತಿನ ಕಾರ್ಯ ಚಟುವಟಿಕೆಗಳನ್ನು ವ್ಯಾಪಕವಾಗಿ ಕೈಗೊಂಡು ಕನ್ನಡಪರ ವಾತಾವರಣ ನಿರ್ಮಿಸಬೇಕೆಂದು ಕ.ಸಾ.ಪ ಜಿಲ್ಲಾಧ್ಯಕ್ಷ ನಿಷ್ಠಿ ರುದ್ರಪ್ಪ ಆದೇಶದಲ್ಲಿ ತಿಳಿಸಿದ್ದಾರೆ.




# ಇ-ಆಸ್ತಿ ತಂತ್ರಾಂಶದಲ್ಲಿ ಆಸ್ತಿ ಮಾಹಿತಿ ನೋಂದಣಿ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಸ್ಥಿರಾಸ್ತಿಗಳ ನೋಂದಣಿಯನ್ನು ಇ-ಆಸ್ತಿ ತಂತ್ರಾಂಶದಲ್ಲಿ ಕಡ್ಡಾಯವಾಗಿ ನೋಂದಾಯಿಸಿಕೊಂಡು ಮಾಹಿತಿ ಪಡೆದುಕೊಳ್ಳಬಹುದು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

ನಗರಾಭಿವೃದ್ಧಿ ಇಲಾಖೆಯು ಬಳ್ಳಾರಿ ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆಸ್ತಿಗಳ ಹಕ್ಕು ವರ್ಗಾವಣೆಗೆ ಸಂಬಂಧಿಸಿದಂತೆ ಇ-ಆಸ್ತಿ ತಂತ್ರಾಂಶ ಮತ್ತು ಕಾವೇರಿ ತಂತ್ರಾಂಶವನ್ನು ಸಂಯೋಜನೆ ಮಾಡಲು ಸಮ್ಮತಿಸಿದ್ದು, ಸೆ.23 ರಿಂದ ಬಳ್ಳಾರಿ ಜಿಲ್ಲಾ ವ್ಯಾಪ್ತಿಯ ಎಲ್ಲಾ ಉಪನೋಂದಣಿ ಕಚೇರಿಗಳಲ್ಲಿ ನಗರ ಸ್ಥಳಿಯ ಸಂಸ್ಥೆಗಳ ಆಸ್ತಿಯನ್ನು ನೋಂದಾಯಿಸಿ, ಆಸ್ತಿಯ ಮಾಹಿತಿಯನ್ನು ಕಡ್ಡಾಯವಾಗಿ ಇ-ಆಸ್ತಿ ತಂತ್ರಾಂಶದಿಂದಲೇ ಪಡೆಯಬೇಕು.

**ಉಪಯೋಗಗಳು:** ಇ-ಆಸ್ತಿ ತಂತ್ರಾಂಶದಿಂದಾಗಿ ಸ್ವತ್ತುಗಳ ನೋಂದಣಿ ವೇಳೆ ಸಾರ್ವಜನಿಕರು ಮೋಸ ಹೋಗುವುದನ್ನು ತಡೆಯುವುದು. ಇ-ಖಾತಾದಿಂದ ಮಾತ್ರ ಸ್ವತ್ತಿನ ಸ್ವರೂಪ ಮತ್ತು ನೈಜ ಮಾಲೀಕರನ್ನು ಗುರುತಿಸಲು ಸಾಧ್ಯವಾಗುತ್ತದೆ.

ನೈಜ ಮಾಲೀಕರಿಗೆ ವಂಚಿಸಿ ಬೇರೆಯವರಿಂದ ಸ್ವತ್ತುಗಳ ನೋಂದಣಿಯನ್ನು ತಪ್ಪಿಸುವುದು. ಸ್ವತ್ತುಗಳ ಖರೀದಿದಾರರಿಗೆ ಸ್ವತ್ತಿನ ನೈಜ ಮಾಲೀಕರನ್ನು ಗುರುತಿಸುವುದು. ಭವಿಷ್ಯದಲ್ಲಿ ಉಂಟಾಗಬಹುದಾದ ವ್ಯಾಜ್ಯ, ಕಾನೂನು ತೊಂದರೆಗಳನ್ನು ತಪ್ಪಿಸುವುದಾಗಿದೆ.

ಹಾಗಾಗಿ ಸಾರ್ವಜನಿಕರು ಇ-ಆಸ್ತಿ ಸಂಯೋಜನೆಯ ಸದುಪಯೋಗ ಪಡೆದುಕೊಳ್ಳುವಂತೆ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸೆ.20ಕ್ಕೆ ಕಾರ್ಮಿಕ ಕಾಯ್ದೆ ಕುರಿತು ಕಾರ್ಯಾಗಾರ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ಕಾರ್ಮಿಕ ಇಲಾಖೆ ವತಿಯಿಂದ ಜಿಲ್ಲೆಯ ಉದ್ಯೋಗದಾತರಿಗೆ, ಗುತ್ತಿಗೆದಾರರಿಗೆ, ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕ ಸಂಘಟನೆಗಳ ಪದಾಧಿಕಾರಿಗಳಿಗೆ ಹಾಗೂ ಕಾರ್ಮಿಕರಿಗೆ ವಿವಿಧ ಕಾರ್ಮಿಕ ಕಾಯ್ದೆಗಳ ಪರಿಣಾಮಕಾರಿ ಅನುಷ್ಠಾನದ ಕುರಿತು ಸೆ.20 ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಗಣೇಶ ದೇವಸ್ಥಾನ ಸ್ಟ್ರೀಟ್‌ನ ಕೊಟ್ಟೂರು ಸ್ವಾಮಿ ಮಠ ಕಾಂಪ್ಲೆಕ್ಸ್‌ನಲ್ಲಿ ಜಿಲ್ಲಾ ಮಟ್ಟದ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕಾರ್ಮಿಕ ಇಲಾಖೆ, ಕಾರ್ಖಾನೆಗಳು, ಬಾಯ್ಲರುಗಳು ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆ, ಜಿಲ್ಲಾ ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆ ಹಾಗೂ ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದೆ.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್.ಹೊಸಮನೆ ಅವರು ಕಾರ್ಯಾಗಾರ ಉದ್ಘಾಟಿಸುವರು. ಬಳ್ಳಾರಿ ಉಪ ವಿಭಾಗದ ಕಾರ್ಮಿಕ ಅಧಿಕಾರಿ ಸಿದ್ದಪ್ಪ ಜಿ.ಖೈನೂರು ಅವರು ಅಧ್ಯಕ್ಷತೆ ವಹಿಸುವರು.

ದಾವಣಗೆರೆಯ ಬಳ್ಳಾರಿ ವಿಭಾಗದ ಸಹಾಯಕ ಕಾರ್ಮಿಕ ಆಯುಕ್ತ ಡಾ.ಅವಿನಾಶ್ ನಾಯ್ಕ, ಕಾರ್ಖಾನೆಗಳು, ಬಾಯ್ಲರುಗಳು ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯ ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕ ವರುಣ.ಆರ್., ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಯ ಶಾಖಾ ವ್ಯವಸ್ಥಾಪಕ ಶಿವಕುಮಾರ್, ಕಾರ್ಮಿಕ ಭವಿಷ್ಯ ನಿಧಿ ಸಂಘಟನೆಯ ಅನುಷ್ಠಾನಾಧಿಕಾರಿ ಟಿ.ಮಾಲತಿ, ಕಾರ್ಮಿಕ ನಿರೀಕ್ಷಕರಾದ 1ನೇ ವೃತ್ತದ ರಮೇಶ್.ಜಿ., 2ನೇ ವೃತ್ತದ ಪರಶುರಾಮ್.ಎನ್.ಎಸ್., ಸಂಡೂರು ವೃತ್ತದ ಕಾರ್ಮಿಕ ನಿರೀಕ್ಷಕ ಮಂಜುನಾಥ್.ಟಿ., ಸಿರುಗುಪ್ಪ ವೃತ್ತ ಕಾರ್ಮಿಕ ನಿರೀಕ್ಷಕ ತಿರುಮಲೇಶ, ಜಿಲ್ಲಾ ಬಾಲ ಕಾರ್ಮಿಕ ಯೋಜನೆಯ ಯೋಜನಾ ನಿರ್ದೇಶಕ ಎ.ಮೌನೇಶ ಸೇರಿದಂತೆ ಕಾರ್ಮಿಕ ಇಲಾಖೆಯ ಎಲ್ಲಾ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:** ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಆಚಾರ-ವಿಚಾರ ಅದುವೇ ವ್ಯಕ್ತಿಯ ಸದಾಚಾರ...

ವ್ಯಕ್ತಿಯ ಬದುಕು ನೈಜ ಹಾಗೂ ಸುಂದರವಾಗಿರಬೇಕಾದರೆ ಆಚಾರ-ವಿಚಾರಗಳಿಗೆ ಬದ್ಧರಾಗಿರಬೇಕು. ಈ ನೀತಿಯುಕ್ತ ನಿಯಮಗಳ ಪರಿಪಾಲನೆಯಿಂದ ಬದುಕು ಪರಿಶುದ್ಧವಾಗಿರಲು ಇವುಗಳ ಮಹತ್ವ ಹೆಚ್ಚಿನದು. ಆಚಾರಕ್ಕೂ ವಿಚಾರಕ್ಕೂ ಕಳ್ಳುಬಳ್ಳಿಯ ಸಂಬಂಧ. ವಿಚಾರದಿಂದ ಅಂತರಂಗದಲ್ಲಿ ಉಂಟಾದ ಅರಿವು ಆಚಾರದಿಂದ ಪರಿಪಕ್ವಗೊಳ್ಳುತ್ತದೆ. ಭ್ರಾಂತಿ ಅಳಿದು ತನ್ಮಯತೆ ರೂಢಿಸಿಕೊಂಡವಗೆ ಮಾತ್ರ ಇವು ಲಭ್ಯ. ಅಂದರೆ ಬಹು ಎಚ್ಚರಿಕೆಯಿಂದಿರಬೇಕೆಂಬ ಅರ್ಥ. ಇವೆರೆಡೂ ಒಂದಕ್ಕೊಂದು ಪೂರಕ. ಒಂದನ್ನಿಡಿದು ಒಂದನ್ನು ಬಿಟ್ಟರೆ ವ್ಯಕ್ತಿತ್ವ ಪರಿಪೂರ್ಣವಾಗಲಾರದು. ಉದಾ: ಪರಸ್ತ್ರೀಯರಿಗಾಸಿಸದಿರುವುದು, ಪರಧನ-ವಸ್ತುಗಳನ್ನು ಅಪಹರಿಸದಿರುವುದು, ಸುಳ್ಳು ಹೇಳದಿರುವುದು, ವಿಶ್ವಾಸಘಾತ ಮಾಡದಿರುವುದು, ಪ್ರಾಣಿಹಿಂಸೆ ಎಸಗದಿರುವುದು ಇತ್ಯಾದಿ... ಇವುಗಳನ್ನು ವ್ಯಕ್ತಿಯು ಜೀವನದಲ್ಲಿ ಅಳವಡಿಸಿ ಕೊಂಡಿರಬೇಕೆಂದು ಸಮಾಜ ನಿರೀಕ್ಷಿಸುತ್ತದೆ.

ದೇಹದ ದುರ್ಗುಣಗಳನ್ನು ಅಳಿಯುವುದು ಆಚಾರವಿಚಾರಗಳ ಮುಖ್ಯ ಉದ್ದೇಶ. ಇಂತಹ ಅಂಶಗಳನ್ನು ಶರಣರ, ದಾಸರ, ಮಹಾತ್ಮರ ರಚನೆಗಳಲ್ಲಿಯಥೇಚ್ಛವಾಗಿ ಕಾಣುತ್ತೇವೆ. ಇವುಗಳ ಸತತ ಅಧ್ಯಯನ, ಮನನ, ಅನುಸರಣೆಯಿಂದ ಬದುಕಿನಲ್ಲಿ ಖಂಡಿತವಾಗಿಯೂ ಅಳವಡಿಸಿಕೊಳ್ಳಬಹುದು. ಅಂದರೆ ಇವು ಅರುಹು(ಜ್ಞಾನ)-ಕುರುಹು(ಲಾಂಛನ)ಗಳಿದ್ದಂತೆ. ಆದರೆ ಬಹಳಷ್ಟು ಜನ ಕುರುಹನ್ನಿಡಿದು ಅರುಹು ಕೈಬಿಟ್ಟಿದ್ದಾರೆ. ವಚನಕಾರರು ಲಾಂಛನಕ್ಕೆ ಶರಣೆಂದಿದ್ದರೂ ಅವರಲ್ಲಿ ತಕ್ಕ ಆಚರಣೆ ಇಲ್ಲದಿದ್ದರೆ ಅಂತಹವರನ್ನು ಧಿಕ್ಕರಿಸಿದ್ದಾರೆ. 'ಆಚಾರ ಹೇಳುವುದಕ್ಕೆ ಬದನೆಕಾಯಿ ತಿನ್ನುವುದಕ್ಕೆ' ಎಂಬಂತೆ ಹೇಳುವುದೊಂದು ಮಾಡುವುದಿನ್ನೊಂದು ಆಗಬಾರದು.



ಡಾ. ರಾಜಶೇಖರ ಜಮದಂಡಿ, ಲೇಖಕರು ಮೊ: 9448441471

Scan For Digital Colourful
HAMPI TIMES E-paper

ಆಚಾರವಿಚಾರವಿಲ್ಲದವರಿಗೆ ಭಾವಶುದ್ಧಿ ಇಲ್ಲ, ಭಾವಶುದ್ಧಿವಿಲ್ಲದವರಿಗೆ ಮುಕ್ತಿ ಇಲ್ಲ.

ಆಚಾರ ಭ್ರಷ್ಟನಿಗೆ ಧರ್ಮ ದೊರಕುವುದೆ? ಧರ್ಮಕ್ಕೆ ಮೊದಲು ಆಚಾರ ವಿಚಾರಗಳಿರಬೇಕು. ಇದರಲ್ಲಿ ದೇಹ, ಮನಸ್ಸು ಶುದ್ಧವಾಗಿರಬೇಕು. ವಿಚಾರ ಮಾಡುವುದು ಸುಲಭ ಅದನ್ನು ಆಚರಣೆಗೆ ತರುವುದು ಕಠಿಣ. ಇವೆರೆಡರಲ್ಲಿ ಸಾಮ್ಯತೆ ಕಂಡು ಬಂದರೆ ಜೀವನವು ಶಿಸ್ತು, ಸಂಯಮ ಮತ್ತು ಕ್ರಮಬದ್ಧವಾಗಿರುವುದು. ಜ್ಞಾನಿಗೆ ಅಥವಾ ಕರ್ಮ



ಯೋಗಿಗೆ ವಿಚಾರಶೀಲತೆ ಅನಿವಾರ್ಯ. ವಿಹಿತವಾದ ಸತ್ಕರ್ಮದಲ್ಲಿ ಪರ್ಯಾವಸಾನವಾಗದ ವಿಚಾರ ವ್ಯರ್ಥ. ವಿಚಾರ ಕರ್ಮಗಳು ಸಮರಸವಾದುದು. ಇವು ಜೀವಿಯ ಯಶಸ್ಸಿನ ರಹಸ್ಯ.

ಬಸವಣ್ಣನವರು ಹೇಳಿದಂತೆ: 'ಆಚಾರವೆ ಸ್ವರ್ಗ ಅನಾಚಾರವೆ ನರಕ' ಆಚಾರವೆಂದರೆ ಶುದ್ಧ ನಡೆ ಅನಾಚಾರವೇ ಅಶುದ್ಧ ನಡೆ. ಇವುಗಳೇ ನಿಜವಾದ ಸ್ವರ್ಗ-ನರಕಗಳು. ಇವುಗಳು ಭೂಲೋಕದಲ್ಲಿರುವುದರಿಂದ ಇಹಲೋಕದ ಜೀವನದಲ್ಲಿಯೇ ಇವುಗಳನ್ನು ಕಾಣಬಹುದೇ ಹೊರತು ಬೇರೆಡೆಗಳಲಿಲ್ಲ. ಅದೇರೀತಿ 'ಆಚಾರವಿಲ್ಲದ ನಾಲಿಗೆ ವಿಚಾರವಿಲ್ಲದೆ ಪರರ ದೂಷಿಸುವುದಕೆ ಚಾಚಿಕೊಂಡಿರುವಂಥ ನಾಲಿಗೆ' ಎಂದು ದಾಸರು ಹಾಡಿರುವುದು ಮಹತ್ವದ ಸಂಗತಿಯಾಗಿದೆ. ವ್ಯಕ್ತಿಯ ಬದುಕಿನಲ್ಲಿ ಅಥವಾ ಆಯಾ ಪ್ರಾದೇಶಕ್ಕನುಗುಣವಾಗಿ ಆಚಾರವಿಚಾರಗಳು ಭಿನ್ನವಾಗಿರಬಹುದು. ಮುಖ್ಯವಾಗಿ ದೇಹದ ದುರ್ಗಣಗಳಾದ ಅರಿಷಡ್ವರ್ಗಗಳಿಂದ ಸಾಧ್ಯವಾದಷ್ಟು ದೂರವಿರುವುದು.

ಆಧುನಿಕ ಯುಗವೆಂಬುದು ವಿಚಾರ ಯುಗವಾಗಿದೆ. ವರ್ತಮಾನದಲ್ಲಿ ಪ್ರತಿಯೊಂದು ವಿಚಾರ ಮಾಡುವವರಿಗೆ ಮಾತ್ರವೇ ಭವಿಷ್ಯ ರೂಪಿಸಿಕೊಳ್ಳಲು ಅನುಕೂಲ. ಮೈಮರೆತು ಅಯೋಗ್ಯತನದಲ್ಲಿ ವರ್ತಿಸಿದರೆ ಅನಾಹುತ ಎದುರಿಸಲೇ ಬೇಕಾದೀತು.

# ತನ್ನ ಭವಿಷ್ಯವ ತಾನೇ ಬರೆದ ಶೀತಲ್ ದೇವಿ

ವಿಧಿ ಲಿಖಿತವ ನೆನೆದು ನೋಯದಿರು, ಬೇಯದಿರು, ಜೀವನದಲ್ಲಿ ಎಂದೂ ದುಃಖಿಯಾಗದಿರು... ನಿನ್ನ ಅಂಗೈ ರೇಖೆಗಳನೇಕೆ ನಂಬುವೆ, ಕೈಗಳೇ ಇಲ್ಲದ ಹೆಳವನಿಗೂ ಕೂಡ ಭವಿಷ್ಯವಿದೆ.... ಎಂಬ ಸಾಲುಗಳನ್ನು ಎಲ್ಲೋ ಓದಿದ ನೆನಪು 2024 ರಲ್ಲಿ ಪ್ಯಾರಿಸ್ ನಲ್ಲಿ ನಡೆದ ಪ್ಯಾರಾಲಂಪಿಕ್ ನಲ್ಲಿ ಕೈಗಳೇ ಇಲ್ಲದ ಶೀತಲ್ ದೇವಿ ಎಂಬ ಯುವತಿ ತನ್ನ ಕಾಲುಗಳನ್ನು ಬಳಸಿ ಬಿಲ್ಗಾರಿಕೆಯಲ್ಲಿ ಪದಕ ವಿಜೇತಳಾಗಿರುವುದನ್ನು ಕಂಡ ಭಾವುಕ ಕ್ಷಣಗಳಲ್ಲಿ ನೆನಪಾದ ಸಾಲುಗಳು ಇವು.

ಅಷ್ಟಕ್ಕೂ ಆಕೆಗೆ ಇರುವ ಗರಿಮೆಗಳು ಏನು ಗೊತ್ತೆ?

ಕೇವಲ 17 ವರ್ಷದ ಅತ್ಯಂತ ಕಿರಿಯ ವಯಸ್ಸಿನ ಜಗತ್ತಿನ ಶ್ರೇಷ್ಠ ಬಿಲ್ಗಾರಿಕೆಯ ಪಟು. ವಿಶ್ವ ದಾಖಲೆಯನ್ನು ಹೊಂದಿದಾಕೆ ಕೈಗಳೇ ಇಲ್ಲದ ಮೊದಲ ಬಿಲ್ಗಾರಳು ಪ್ಯಾರಿಸ್ ನಲ್ಲಿ ನಡೆದ ಪ್ಯಾರಾ ಒಲಿಂಪಿಕ್ 2024ರ ಡಬಲ್ಸ್ ಪಂದ್ಯದಲ್ಲಿ ಕಂಚಿನ ಪದಕ ಗಳಿಸಿದ ಆರ್ಚರ್ 2022ರ ಏಷ್ಯನ್ ಪ್ಯಾರಾ ಗೇಮ್ಸ್ ನಲ್ಲಿ ಎರಡು ಚಿನ್ನ ಮತ್ತು ಒಂದು ಬೆಳ್ಳಿ ಪದಕವನ್ನು ಪಡೆದ ಈಕೆ ಅರ್ಜುನ ಪ್ರಶಸ್ತಿ ಪುರಸ್ಕೃತಳು.

ಭಾರತ ದೇಶದ ಜಮ್ಮು ಮತ್ತು ಕಾಶ್ಮೀರ ರಾಜ್ಯದ ಕಿಸ್ತವಾರ ಜಿಲ್ಲೆಯ ಲೊಯ್ಧರ್ ಎಂಬ ಊರಿನಲ್ಲಿ ಜನವರಿ 10 2007 ರಲ್ಲಿ ಶೀತಲ್ ದೇವಿಯ ಜನನ ವಾಯಿತು. ಹುಟ್ಟು ವಾಗಲೇ ಫೋಕೋ ಮೇಲಿಯ ಎಂಬ ಅತ್ಯಂತ ವಿರಳವಾದ ವೈದ್ಯಕೀಯ ತೊಂದರೆಯಿಂದ ಬಳಲುತ್ತಿದ್ದ ಶೀತಲದೇವಿ ಎರಡು ಕೈಗಳಿಲ್ಲದ ಸ್ಥಿತಿ ಯಲ್ಲಿಯೇ ಜನಿಸಿದಳು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಎಲ್ಲ ಸಾಮಾನ್ಯ ಮಕ್ಕಳಂತೆ ಆಕೆಗೆ ತನ್ನ ಕೆಲಸಗಳನ್ನು ಮಾಡಿಕೊಳ್ಳಲು ಸಾಧ್ಯವಾಗದೇ ಹೋದರೂ ಮನೆಯವರ ಸಹಕಾರ ಮತ್ತು ಬೆಂಬಲ ಆಕೆಗಿತ್ತು. ಸಾಮಾನ್ಯ ವಾಗಿ ಕೈಗಳಿಂದ ಮಾಡುವ ಎಲ್ಲಾ ಕೆಲಸಗಳಿಗೂ ತನ್ನ ಕಾಲುಗಳನ್ನೇ ಆಕೆ ಅವಲಂಬಿಸಿದ್ದಳು.

2019ರಲ್ಲಿ ಭಾರತೀಯ ಸೇನೆಯವರು ಆಯೋಜಿಸಿದ್ದ ಕಾರ್ಯಕ್ರಮವೊಂದರಲ್ಲಿ ಭಾಗಿಯಾಗಿದ್ದ ಆಕೆ ಭಾರತೀಯ ಸೇನೆಯ ರೈಫಲ್ಸ್ ಯೂನಿಟ್ ನವರ ಸಹಕಾರದಿಂದ ಶಿಕ್ಷಣ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಪಡೆದಳು. ಶೀತಲ್ ಳ ಆಸಕ್ತಿ, ಶ್ರದ್ಧೆ ಮತ್ತು ಆತ್ಮವಿಶ್ವಾಸವನ್ನು ಕಂಡು ಆಕೆಯ ತರಬೇತುದಾರರಾದ ಅಭಿಲಾಷ ಚೌದ್ರಿ ಮತ್ತು ಕುಲದೀಪ್ ವಾದ್ವಾನ್ ಪ್ರಾರಂಭದಲ್ಲಿ ಆಕೆಗೆ ಕೃತಕ ಅಂಗಗಳನ್ನು ಜೋಡಿಸಿ ಆಕೆಗೆ ತರಬೇತಿ ನೀಡಲು ಪ್ರಯತ್ನಿಸಿದರು. ಆದರೆ ಆಕೆಯ ಕಾಲುಗಳ ಬಲವನ್ನು ಗಮನಿಸಿದ ವೈದ್ಯರು ಆಕೆ ಕಾಲುಗಳನ್ನು ಬಳಸಿಯೇ ಪರ್ವತಗಳನ್ನು ಏರಲು ಪ್ರೋತ್ಸಾಹ ನೀಡಲು ಹೇಳಿದರು.

ಇದುವರೆಗೂ ಕೈಗಳಿಲ್ಲದ ವ್ಯಕ್ತಿಗೆ ಬಿಲ್ಗಾರಿಕೆಯನ್ನು ಹೇಳಿಕೊಟ್ಟಿರದ ಆಕೆಯ ತರಬೇತುದಾರರು ಮ್ಯಾಟ್ ಸ್ಟಡ್ಜ್ ಮ್ಯಾನ್ ಎಂಬ ವ್ಯಕ್ತಿ ಕಾಲುಗಳಿಂದಲೇ ಬಿಲ್ಗಾರಿಕೆಯನ್ನು ಮಾಡುತ್ತಿರುವುದನ್ನು ಅರಿತು ಅಂತೆಯೇ ಆಕೆಯ ತರಬೇತಿಯನ್ನು ಪ್ರಾರಂಭಿಸಿದರು. ಮುಂದಿನ 11 ತಿಂಗಳ ಸತತ ತರಬೇತಿಯ ನಂತರ ಆಕೆ ಮೊದಲ ಬಾರಿಗೆ 2022 ರಲ್ಲಿ ನಡೆದ ಏಷ್ಯನ್ ಪ್ಯಾರಾ ಗೇಮ್ಸ್ ನ ಮಿಶ್ರ ಡಬಲ್ಸ್ ಬಿಲ್ಗಾರಿಕೆ ಆಟದಲ್ಲಿ ಮೊದಲ ಚಿನ್ನದ ಪದಕವನ್ನು, ಮಹಿಳೆಯರ ಬಿಲ್ಗಾರಿಕೆಯಲ್ಲಿ ಮತ್ತೊಂದು ಚಿನ್ನದ ಪದಕವನ್ನು ಗಳಿಸಿದಳು. ಅದೇ ಪ್ಯಾರ ಗೇಮ್ಸ್ ನಲ್ಲಿ ಬೆಳ್ಳಿಯ ಪದಕವನ್ನು ಮಹಿಳೆಯರ ಮಿಶ್ರ ಡಬಲ್ಸ್ ನಲ್ಲಿ ಗಳಿಸಿದ ಆಕೆ ವಿಶ್ವದ ಅಂಗವಿಕಲ ಬಿಲ್ಗಾರಿಕೆಯ ಪಟ್ಟಿಯಲ್ಲಿ ಮೇಲ್ದರ್ಜೆಯ ಸ್ಥಾನವನ್ನು ಗಳಿಸಿದಳು.

ಏಷಿಯನ್ ಪ್ಯಾರಾಲಂಪಿಕ್ ಕಮಿಟಿಯು ಆಕೆಗೆ 2023ರಲ್ಲಿ ವರ್ಷದ ಅತ್ಯುತ್ತಮ ಯುವ ಆಟಗಾರ್ತಿ ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ತನ್ನ ಈ ಸಾಧನೆಗೆ 2023ರ ಸಾಲಿನ ಅರ್ಜುನ ಪ್ರಶಸ್ತಿಯನ್ನು 2024 ಜನವರಿ 9ರಂದು ಸ್ವೀಕರಿಸಿದಳು. ಆ ವರ್ಷ ನಡೆದ ಲೋಕಸಭಾ ಚುನಾವಣೆಯಲ್ಲಿ ಆಕೆ ಚುನಾವಣಾ ಯುತ ಐಕಾನ್ ಆಗಿ ಎಲ್ಲರಿಗೂ ಮತ ಹಾಕಲು ಕೋರಿಕೊಂಡಳು.

2024ರ ಪ್ಯಾರಿಸ್ ಪ್ಯಾರಾ ಒಲಂಪಿಕ್ ನಲ್ಲಿ ಅತ್ಯಂತ ಕಿರಿಯ ವಯಸ್ಸಿನ ಆಟಗಾರ್ತಿಯಾಗಿ ದಾಖಲಾದ ಶೀತಲ್ ದೇವಿ ಈ ಹಿಂದೆ ದಾಖಲಾದ 698 ಪಾಯಿಂಟ್ ಗಳನ್ನು ಹಿಂದಿಕ್ಕಿ 703 ಪಾಯಿಂಟ್‌ಗಳನ್ನು ಪಡೆದು1/16 ರ ಅರ್ಹತಾ ಸುತ್ತಿಗೆ ಪ್ರವೇಶ ಪಡೆದಳು. ಮುಂದುವರೆದು 1/8 ರಲ್ಲಿ ಕೇವಲ ಒಂದು ಅಂಕದಿಂದ ಹಿಂದೆ ಸರಿದ ಆಕೆ ಮಿಕ್ಸ್ಡ್ ಟೀಮ್ ಕಾಂಪೌಂಡ್ ಓಪನ್ ಕೆಟಗರಿಯಲ್ಲಿ ರಾಕೇಶ ಕುಮಾರ್ ಅವರೊಂದಿಗೆ ಭಾಗವಹಿಸಿ ಕಂಚಿನ ಪದಕವನ್ನು ಪಡೆದಳು.




ತನ್ನ ಸಾಧನೆಗೆ ತನ್ನ ಕೋಚ್ ಅಭಿಲಾಷ ಚೌದ್ರಿ ಮತ್ತು ಕುಲದೀಪ್ ವಾದ್ವಾನ್ ಅವರ ನಿರಂತರ ತರಬೇತಿ ಮತ್ತು ತನ್ನ ಕುಟುಂಬದ ಪ್ರೋತ್ಸಾಹ ವೇ ಕಾರಣ ಎಂದು ಹೇಳುವ ಶೀತಲ್ ದೇವಿಗೆ ಮುಖ್ಯವಾಗಿ ತನ್ನ ತಾಯಿ ಸದಾ ತನ್ನ ಜೊತೆಗಿದ್ದು ಬೆಂಬಲ ನೀಡುತ್ತಿರುವುದು ಅತಿ ದೊಡ್ಡ ಬಲವಾಗಿದೆ. ಕೇವಲ 17ರ ಹರೆಯದ ಶೀತಲ್ ದೇವಿ ಭವಿಷ್ಯದಲ್ಲಿ ಪ್ಯಾರಾ ಒಲಿಂಪಿಕ್ ನ ಆರ್ಚರಿ ವಿಭಾಗದಲ್ಲಿ ಹಲವಾರು ಚಿನ್ನದ ಪದಕಗಳನ್ನು ಮುಡಿಗೇರಿಸಿಕೊಳ್ಳಲಿ, ಆ ಮೂಲಕ ಭಾರತದ ಕೀರ್ತಿಯನ್ನು ಜಗತ್ತಿನೆಲ್ಲೆಡೆ ಹರಡಲಿ. ಭಾರತದ ಯುವ ಸಮುದಾಯ ಆಕೆಯ ಈ ಸಾಧನೆಯಿಂದ ಸ್ಫೂರ್ತಿಯನ್ನು ಪಡೆದು, ಸಣ್ಣಪುಟ್ಟ ತೊಂದರೆಗಳಿಗೆ ಅಂಜದೆ ಅಳುಕದೆ ಮಹತ್ತರವಾದ ಸಾಧನೆಗೈಯಲಿ ಎಂದು ಹಾರೈಸುವ

ನಿಮ್ಮ ಸಂಸ್ಥೆಯ ಬ್ರ್ಯಾಂಡಿಂಗ್, ಉತ್ಪನ್ನ, ಸೇವೆಗಳ ಪ್ರಚಾರಕ್ಕಾಗಿ ಆಲೋಚಿಸುತ್ತಿದ್ದೀರಾ ?
ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ
ಚಿಕ್ಕ ಮೊತ್ತ ದೊಡ್ಡ ಜಾಹೀರಾತು
ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ
90 ಸಾವಿರಕ್ಕೂ ಅಧಿಕ ಇ-ಪೇಪರ್ ಓದುಗರು
94486 33038 hampitimes@gmail.com
ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ
ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ
Print & Digital News Paper
ಹಂಪಿ ಟೈಮ್ಸ್ ಇ-ಪೇಪರ್
ಹಂಪಿ ಟೈಮ್ಸ್ ವಿಸ್ತಾರ : ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್

## ಕವಿ ಮನಸು

### ಒಲವಿನ ನಶೆ



ಕನಸಿನ ಮನ್ಮಥ ಜನುಮದ ಜೋಡಿಯು
ನನಸಲಿ ಬಂದ ನನಗಾಗಿ

ಇನಿಯನ ಸೇರಲು ಮನದಲಿ ಕಾತರ
ತನುವಿದು ಅರಳಿ ಹೂವಾಗಿ

ಗಾವುದ ದೂರದೆ ಜೀವವ ಸೆಳೆಯುವ
ಯಾವುದೊ ಶಕ್ತಿ ಅವನಲ್ಲಿ

ಕಾವನು ಏರಿಸಿ ಭಾವನೆ ತುಂಬಿದ
ನೋವನು ಮರೆಸಿ ಹಿತವಾಗಿ

ಮುಸುಕಿದ ಒಲವಿದು ಹೊಸತನ ನನ್ನಲಿ
ಕಸಿದಿದೆ ನಿದಿರೆ ಇರುಳಲ್ಲಿ

ಉಸಿರಲಿ ಬೆರೆತಿಹ ಹಸಿವನು ಮರೆಸಿದ
ನಶೆಯಿದೆ ನನ್ನ ಮನದಲ್ಲಿ

ಕಣ್ಣಿನ ಸನ್ನೆಗೆ ಸಣ್ಣನೆ ನಡುಕವು
ಮಣ್ಣಲಿ ಕಾಲು ಗೀಚುತಿದೆ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

### ಅವಸರ

ಬಾಳೆಂಬ ಪುಸ್ತಕದಲಿ ಜೀವನವೆಂಬುದು
ಅಕ್ಷರ
ನಾಳೆಯ ದಿನಗಳು ಇರಬೇಕು ಸುಂದರ
ಹಾಳೆಯು ಹರಿದು ಹೋಗಬಹುದು ಎಚ್ಚರ
ಸಂಬಂಧಗಳು ಎಲ್ಲರೊಂದಿಗೆ ಇರಲಿ
ಹಿತಕರ

ಅಪಘಾತಕ್ಕೆ ಕಾರಣವೇ ಅವಸರ
ಗಡಿಬಿಡಿಯಿಂದ ಆಗದಿರಲಿ ಅವಾಂತರ
ಕೆಲಸ ಮುಗಿಸಲು ಬೇಡ ಆತುರ
ಯೋಚಿಸಿ ತೆಗೆದುಕೊಳ್ಳಿ ನಿರ್ಧಾರ

ದೂರಾಗಲಿ ಮನದ ಬೇಸರ
ಕಲಿಕೆಗೆ ಇರಬೇಕು ಕಾತರ
ಬದುಕಿನ ಓಟ ಸರಸರ
ಜೀವಕೆ ಇರದಿರಲಿ ಅವಸರ

– ಚೇತನ ಭಾರ್ಗವ ಬೆಂಗಳೂರು

### ಅಮ್ಮ ಮಗಳು

ಉದ್ದನೆ ಕೂದಲು ಬೇಕಮ್ಮ
ಎರಡು ಜಡೆಯ ಕಟ್ಟಮ್ಮ
ಶಾಲೆಗೆ ತಡವಾಯಿತಮ್ಮ
ಬೇಗ ಬೇಗ ಜಡೆ ಹೆಣೆಯಮ್ಮ

ಕೂದಲಿಗೆ ಹಚ್ಚುವೆ ಮೊದಲು ಎಣ್ಣೆ
ಕೈ ಕಟ್ಟಿ ಕುಳಿತುಕೊ ಸುಮ್ಮನೆ
ನಾಳೆಯಿಂದ ಬೇಗನೆ ಏಳಬೇಕು
ಬೇಗ ಬೇಗ ನೀನು ತಯಾರಾಗಬೇಕು

ದಿನವು ಇವರದ್ದು ಇದೆ ಮಾತು
ಕೇಳಿ ಕೇಳಿ ಸಾಕಾಯಿತು
ನನಗು ದೋಸೆಯು ಬರುವುದು
ತಡವಾಯಿತು
ಮನದಲೆ ನುಡಿಯುತ ಟಾಮಿಯು
ಮಲಗಿತು

– ಸುವರ್ಣಾ ಭಟ್ಟ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ಸಜ್ಜೆ ಬೆಳೆಯ ಕ್ಷೇತ್ರೋತ್ಸವ

## ಡಾ.ಎಂ.ವಿ.ರವಿ ಹೇಳಿಕೆ | 90 ದಿನಗಳಲ್ಲಿ ಈ ತಳಿ ಕಟಾವಿಗೆ ಬರುತ್ತದೆ

■ ಹಂಪಿ ಟೈಮ್ಸ್ ಕೊಪ್ಪಳ

ಯಲಬುರ್ಗಾ ತಾಲೂಕಿನ ವಣಗೇರಿ ಗ್ರಾಮದಲ್ಲಿ ಜೈವಿಕ ಬಲವರ್ಧನೆಗೊಳಿಸಿದ ಸಜ್ಜೆ ಬೆಳೆಯ ಸಂಕರಣ ತಳಿ ವಿ.ಪಿ.ಎಮ್.ಹೆಚ್.–14 ಬೆಳೆಯ ಕ್ಷೇತ್ರೋತ್ಸವ ನಡೆಯಿತು.

ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ವಿಸ್ತರಣಾ ಮುಂದಾಳು ಡಾ.ಎಂ.ವಿ.ರವಿ ಕಾರ್ಯಕ್ರಮ ಉದ್ಘಾಟಿಸಿ ಮಾನಾಡಿ, ವಿ.ಪಿ.ಎಮ್.ಹೆಚ್.–14 ಸಜ್ಜೆ ಬೆಳೆಯ ಸಂಕರಣ ತಳಿಯನ್ನು ಕೃಷಿ ವಿಶ್ವವಿದ್ಯಾಲಯದ ತಳಿ ವಿಜ್ಞಾನಿ ಡಾ. ಅಥೋನಿ ಬಂಡೇನವಾಜ್ ಅವರು ಅಭಿವೃದ್ಧಿಪಡಿಸಿದ್ದಾರೆ. ಮುಂಚೂಣಿ ಪ್ರಾತ್ರಕ್ಷಿಕೆಯಾಗಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು ಹಾಗೂ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ ಕೊಪ್ಪಳದಿಂದ ಯಲಬುರ್ಗಾ ತಾಲ್ಲೂಕಿನ ಎರಡು ಗುಚ್ಛ ಗ್ರಾಮ ವಣಗೇರಿ ಮತ್ತು ಮಂಗಳೂರುಗಳಿಂದ 10 ಜನ ರೈತ ಫಲಾನುಭವಿಗಳನ್ನು ಆಯ್ಕೆಮಾಡಿ ಉಚಿತವಾಗಿ ನೀಡಲಾಗಿದೆ. ರೈತರು ಜೂನ್ ತಿಂಗಳ ಕೊನೆವಾರದಲ್ಲಿ ಬಿತ್ತನೆ ಮಾಡಿದ್ದು ಈಗ ಕಟಾವಿಗೆ ಸಿದ್ದವಾದ ಸಂದರ್ಭದಲ್ಲಿ ಈ ಕ್ಷೇತ್ರೋತ್ಸವವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಇದೊಂದು ಉತ್ತಮ ಸಂಕರಣ ತಳಿಯಾಗಿದ್ದು, ಮೊದಲಬಾರಿಗೆ ಜಿಲ್ಲೆಯಲ್ಲಿ ಪರಿಚಯಿಸಲಾಗುತ್ತಿದೆ. ಕೇವಲ 90 ದಿನಗಳ ಅವಧಿಯಲ್ಲಿ ಕಟಾವಿಗೆ ಬರುವ ಈ ತಳಿ ಸತು ಮತ್ತು ಕಬ್ಬಿಣದ ಅಂಶಗಳನ್ನು ಹೊಂದಿದ್ದು, ಉತ್ತಮ




ತೂಕವುಳ್ಳದ್ದಾಗಿದೆ. ಮಧುಮೇಹಿ ಮತ್ತು ಸಂದೀವಾತ ರೋಗಗಳಿಗೆ ಇದೊಂದು ಉತ್ತಮ ಔಷಧಿಯಾಗಿದ್ದು, ದಿನನಿತ್ಯ ಆಹಾರದಲ್ಲಿ ರೊಟ್ಟಿ ಅಲ್ಲದೆ ಸಜ್ಜೆ ಬಾತ್, ಸಜ್ಜೆ ಪಾಯಸ ಹೀಗೆ ಅನೇಕ ತರಹದ ಖಾದ್ಯಗಳನ್ನು ಮಾಡಿ ಸೇವಿಸಬಹುದಾಗಿದೆ ಎಂದರು.

ಎಕರೆಗೆ 2 ಕೆಜಿ. ಬೀಜ ಬಿತ್ತನೆ ಮಾಡಬಹುದಾಗಿದೆ. ಮತ್ತು ಎಕರೆಗೆ 20 ಕೆಜಿ. ಸಾರಜನಕ, 10 ಕೆಜಿ. ರಂಜಕ ನೀಡಿದರೆ ಎಕರೆಗೆ ಸುಮಾರು 8 ರಿಂದ 10 ಕ್ವಿಂಟಾಲ್ ಕಾಳಿನ ಇಳುವರಿ ಮತ್ತು 4 ಟನ್‌ನಷ್ಟು ಮೇವಿನ ಇಳುವರಿಯನ್ನು ಈ ತಳಿಯಿಂದ ಪಡೆಯಬಹುದಾಗಿದೆ ಎಂದು ತಿಳಿಸಿದರು.

ಗುಳದಳ್ಳಿ ಕೃಷಿ ಸಂಶೋಧನಾ ಕೇಂದ್ರದ ಕ್ಷೇತ್ರ ಅಧೀಕ್ಷಕರು ಮತ್ತು ಬೀಜ ವಿಜ್ಞಾನಿ ಡಾ. ಹನುಮಂತಪ್ಪ ದಾಸನಳ್ಳಿ ಅವರು ತಳಿಯ ಕುರಿತು ತಿಳಿಸಿದರು. ಈ ಬೆಳೆಯನ್ನು ತೊಗರಿ ಮುಂತಾದ ಬೆಳೆಗಳೊಂದಿಗೆ ಮಿಶ್ರ ಬೆಳೆಯಾಗಿ ಬೆಳೆದಲ್ಲಿ ರೈತರು ಹೆಚ್ಚಿನ ಲಾಭ ಪಡೆಯಬಹುದೆಂದು ಮಾಹಿತಿ ನೀಡಿದರು.

ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ವಾಮನಮೂರ್ತಿ ಅವರು ಮಾತನಾಡಿ, ಸಜ್ಜೆ ಬೆಳೆಗೆ ತಗಲುವ ಕೀಟ ರೋಗಗಳು ಮತ್ತು ಅವುಗಳ ಹತೋಟಿ ಕುರಿತು ಮಾಹಿತಿ ನೀಡಿದರು. ಎಕರೆಗೆ ಸುಮಾರು ರೂ.5,000 ಖರ್ಚು ತಗುಲಬಹುದಾದ ಈ ಬೆಳೆಗೆ ಈಗಿನ ಸರಕಾರ ಸೂಚಿಸಿದ ಬೆಂಬಲ ಬೆಲೆಗೆ ಅನುಗುಣವಾಗಿ ಎಕರೆಗೆ ರೂ. 20,000ಕ್ಕಿಂತ ಹೆಚ್ಚು ನಿವ್ವಳ ಲಾಭ ಪಡೆಯಬಹುದಾಗಿದೆ ಎಂದು ತಿಳಿಸಿದರು.

ಪ್ರಕಾಶ ಬಣಕಾರ, ಕ್ಷೇತ್ರ ಸಹಾಯಕರು, ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಕೊಪ್ಪಳ, ವಣಗೇರಿ ಗ್ರಾಮದ ಮಾಜಿ ಅಧ್ಯಕ್ಷ ಶಿವಮೂರ್ತಯ್ಯ, ಕೃಷಿ ಪರಿಕರಗಳ ಮಾರಾಟಗಾರ ಕಲ್ಯಾಣಯ್ಯ ಓಲಿ ಹಾಗೂ ಹತ್ತು ಜನ ಫಲಾನುಭವಿ ರೈತರು ಮತ್ತು ಗ್ರಾಮದ 30ಕ್ಕೂ ಹೆಚ್ಚಿನ ರೈತರು ಭಾಗವಹಿಸಿದ್ದರು.


# ಪ್ರಗತಿ ಸಹಕಾರಿಗೆ 14.15 ಲಕ್ಷ ರೂ ಲಾಭ ಸದಸ್ಯರಿಗೆ ಶೇ.25 ಲಾಭ ಹಂಚಿಕೆ

## ಪ್ರಗತಿ ಪತ್ತಿನ ಸೌಹಾರ್ದ ಸಹಕಾರಿ ಅಧ್ಯಕ್ಷ ಕೆ.ವಿ.ಪತ್ತಾರ ಹೇಳಿಕೆ | 19ನೇ ವಾರ್ಷಿಕ ಸಭೆ

■ ಹಂಪಿ ಟೈಮ್ಸ್ ಹೊಸಪೇಟೆ

ನಗರದ ಪ್ರಗತಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ 2023–24 ನೇ ಸಾಲಿನಲ್ಲಿ ರೂ. 14,15,317/– ನಿವ್ವಳ ಲಾಭಗಳಿಸಿದ್ದು. ಸದಸ್ಯರಿಗೆ ಶೇ.25 ಲಾಭಾಂಶ ವಿತರಿಸಲಾಗುವುದು ಎಂದು ಪ್ರಗತಿ ಪತ್ತಿನ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ಕೆ,ವಿ.ಪತ್ತಾರ ತಿಳಿಸಿದರು.

ನಗರದ ಸಂಘದ ಕಛೇರಿ ಆವಣದಲ್ಲಿ ಭಾನುವಾರ ಜರುಗಿದ 19ನೇ ವಾರ್ಷಿಕ ಅಧ್ಯಕ್ಷತೆವಹಿಸಿ ಮಾತನಾಡಿದರು. ಸಹಕಾರಿಯ ಸದಸ್ಯರು, ನಿರ್ದೇಶಕರು ಹಾಗೂ ಸಿಬ್ಬಂದಿಗಳ ಸಹಕಾರದಿಂದ ಸಹಕಾರಿಯು ಪ್ರಗತಿಯ ಹಾದಿಯಲ್ಲಿ ಸಾಗಿದೆ. ಸದಸ್ಯರ ವಿಶ್ವಾಸರ್ಹತೆ ಪಡೆದಿದ್ದು, ಸದಸ್ಯರಿಗೆ ಉತ್ತಮ ಸೇವೆನೀಡಲಾಗಿತ್ತಿದೆ. ಸಣ್ಣ ಹಾಗೂ ಮಧ್ಯಮ ವ್ಯಾಪರಸ್ಥರ ಮಳಿಗೆ ಬಾಗಿಲುಗಳಿಗೆ ತೆರಳಿ ನಿತ್ಯ ಪಿಗ್ಮಿಸಂಗ್ರಹಿಸಲಾಗುತ್ತಿದೆ. ಪಿಗ್ಮಿ ಸಂಗ್ರಹಕರು ಸದಸ್ಯರಿಗೆ ಉತ್ತಮ ಸೇವೆ ನೀಡುತ್ತಿರುವುದರಿಂದ ಪಿಗ್ಮಿ ಕಟ್ಟುವ ಸದಸ್ಯರ ಸಂಖ್ಯೆಯು ಹೆಚ್ಚಾಗುತ್ತದೆ. ಸಹಕಾರಿಯ ಸದಸ್ಯರಿಗೆ ಜಾಮೀನು ಸಾಲ, ತೋರಾಯ್ಕೆ ಸಾಲ, ವಾಹನ ಸಾಲ, ಬಂಗಾರದ ಆಭರಣ ಆಧಾರಿತ ಸಾಲ, ಮುದ್ದತ್ತುಠೇವು




ಸಾಲ, ಪಿಗ್ಮಿ ಆಧಾರಿತ ಸಾಲ ನೀಡಲಾಗಿದೆ. ಪಿಗ್ಮಿ ಕಟ್ಟಿ ಉಳಿತಾಯ ಮಾಡಬೇಕೆನ್ನುವರು ಸಹಕಾರಿ ಕಛೇರಿಯನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದು ಎಂದರು.

ನಮ್ಮ ಸಹಕಾರಿ ಸಂಘದ ಸದಸ್ಯರುಗಳಲ್ಲಿ ಗರಷ್ಠ ವ್ಯವಹಾರದಲ್ಲಿ ತೊಡಗಿಸಿಕೊಂಡು ಅತಿ ಹೆಚ್ಚು ಮುದ್ದತ್ತು ಠೇವಣೆ ಮಾಡಿದ ಸದಸ್ಯರಾದ ಬಿ.ಆರ್ ಮಹೇಶ, ಎಮ್.ಗೋಪಾಲಶೆಟ್ಟಿ, ಅನ್ಸರ್‌ಅಹ್ಮದ್ ಹಾಗೂ 2023–24 ನೇ ಸಾಲಿನಲ್ಲಿ ಸಂಘದಿಂದ ಅತಿ ಹೆಚ್ಚು ಸಾಲ ಪಡೆದು ಪ್ರಮಾಣಿಕವಾಗಿ ಸಕಾಲದಲ್ಲಿ ಸಾಲ ಮರುಪಾವತಿಮಾಡಿದ ಕೆ.ಟಿ.ಶ್ರೀನಿವಾಸಮೂರ್ತಿ, ಅಬ್ದುಲಕರೀಂ.ಎಮ್, ಕೆ.ಶ್ರೀನಾಥ ಇವರನ್ನು ಸಹಕಾರಿಯಿಂದ ಸನ್ಮಾನಿಸಲಾಯಿತು.

ಈ ಸಭೆಯಲ್ಲಿ ಸಹಕಾರಿಯ ಉಪಾಧ್ಯಕ್ಷ ಐ.ಭೀಮಾಜೀ, ನಿರ್ದೇಶಕರಾದ ಎ.ಕೃಷ್ಣಪ್ಪ. ಕೆ.ಸುರೇಶಆಚಾರ. ಬಿ.ರಾಮಚಂದ್ರ. ಕೆ. ಹೇಮಾವತಿ, ಆರ್.ಮುರಳೀಧರ್, ಬಿ.ಕಮಲ, ಬಿ.ಸಿರಿಯಾಚಾರ್, ಪ್ರಸನ್ನಾಚಾರ, ವಿಶೇಶ ಅಹ್ವಾನಿತರಾದ ಎಸ್.ಕೆ ರಾಜಶೇಖರಾಚಾರ ಹಾಗೂ ಸಿಇಒ ಕೆ.ನಾಗರಾಜ ಸೇರಿದಂತೆ ಸಿಬ್ಬಂದಿ ಉಪಸ್ಥಿರಿದ್ದರು.

# ರಾಜ್ಯ ಮಟ್ಟದ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಹೊಸಪೇಟೆ

2024ರ ಮಕ್ಕಳ ದಿನಾಚರಣೆಯ ಪ್ರಯುಕ್ತ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿ ಹಾಗೂ ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿಗಳಿಗೆ ಮತ್ತು ಸಂಸ್ಥೆಗಳಿಗೆ ರಾಜ್ಯ ಪ್ರಶಸ್ತಿ ನೀಡಲು ಅರ್ಜಿ ಆಹ್ವಾನಿಸಲಾಗಿದ್ದು, ಅಕ್ಟೋಬರ್ 03 ಕೊನೆಯ ದಿನಾಂಕವಾಗಿರುತ್ತದೆ.

ಮಕ್ಕಳು ತಮ್ಮ ಪ್ರಾಣದ ಹಂಗನ್ನು ತೊರೆದು ಹಾಗೂ ಸಮಯ ಪ್ರಜ್ಞೆಯಿಂದ ಇತರರ ಪ್ರಾಣದ ರಕ್ಷಣೆಗಾಗಿ ಧೈರ್ಯ ಸಾಹಸ ಪ್ರದರ್ಶಿಸಿದ 6 ರಿಂದ 18 ವರ್ಷದೊಳಗಿನ ಬಾಲಕರಿಗೆ "ಹೊಯ್ಸಳ" ಮತ್ತು ಬಾಲಕಿಯರಿಗೆ "ಕೆಳದಿ ಚೆನ್ನಮ್ಮ' ಶೌರ್ಯ ಪ್ರಶಸ್ತಿಯನ್ನು ಪ್ರಧಾನ ಮಾಡಲಾಗುತ್ತದೆ. ಈ ಪ್ರಕರಣವು 01.08.2023 ರಿಂದ 31.07.2024 ರೊಳಗೆ ನಡೆದಿರಬೇಕು. ದಿನಾಂಕ: 01.08.2006 ರಂದು ಹಾಗೂ ನಂತರ ಜನಿಸಿದ ಮಕ್ಕಳು ಈ ಪ್ರಶಸ್ತಿಗೆ ಅರ್ಹರಾಗಿರುತ್ತಾರೆ. ಪ್ರಶಸ್ತಿಗೆ ಆಯ್ಕೆಯಾದ ಮಕ್ಕಳಿಗೆ ನಗದು ಬಹುಮಾನಮತ್ತುಪ್ರಶಸ್ತಿಪತ್ರಒಳಗೊಂಡಿರುತ್ತದೆ.

ಇದೇ ಸಂದರ್ಭದಲ್ಲಿ ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಕನಿಷ್ಠ 05 ವರ್ಷಗಳ ಕಾಲ ಅತ್ಯುತ್ತಮ ಸೇವೆ ಸಲ್ಲಿಸಿರುವ ವ್ಯಕ್ತಿಗಳಿಗೆ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ಹಾಗೂ ಸಂಸ್ಥೆಗಳಿಗೆ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರವನ್ನು ನೀಡಿ ಗೌರವಿಸಲಾಗುವುದು. ಪ್ರಶಸ್ತಿಗಾಗಿ ನಿಗದಿಪಡಿಸಿರುವ ಅರ್ಜಿ ನಮೂನೆಗಳನ್ನು ಹೊಸಪೇಟೆಯ 16ನೇ ವಾರ್ಡ್ನ ಬಸವೇಶ್ವರ ಬಡಾವಣೆ, ಸಪ್ತಗಿರಿ ಶಾಲೆಯ ಹತ್ತಿರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಪಡೆದು, ಕನ್ನಡ ಭಾಷೆಯಲ್ಲಿಯೇ ಭರ್ತಿ ಮಾಡಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕಚೇರಿಗೆ ಸಂಪರ್ಕಿಸಬಹುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸೆ.21ಕ್ಕೆ ತಾಲೂಕು ಮಟ್ಟದ ದಸರಾ ಕ್ರೀಡಾಕೂಟಕ್ಕೆ ಚಾಲನೆ

■ ಹಂಪಿ ಟೈಮ್ಸ್ ಕೊಪ್ಪಳ

2024–25ನೇ ಸಾಲಿನ ಕೊಪ್ಪಳ ತಾಲೂಕಿನ ತಾಲೂಕು ಮಟ್ಟದ ದಸರಾ ಕ್ರೀಡಾಕೂಟದ ಉದ್ಘಾಟನಾ ಸಮಾರಂಭವು ಸೆ.21ರಂದು ಬೆಳಿಗ್ಗೆ 9ಕ್ಕೆ ಜಿಲ್ಲಾ ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿದೆ.

**ವಿಶೇಷ ಸೂಚನೆ:** ತಾಲ್ಲೂಕು ಮಟ್ಟದ ದಸರಾ ಕ್ರೀಡಾಕೂಟದ ಸ್ಪರ್ಧೆಗಳಲ್ಲಿ ಆಯಾ ತಾಲ್ಲೂಕಿನ ಕ್ರೀಡಾಪಟು ಅಥವಾ ತಂಡ ಅದೇ ತಾಲೂಕಿನ ಕ್ರೀಡಾಕೂಟದಲ್ಲಿ ಭಾಗವಹಿಸತಕ್ಕದ್ದು. ವಿಜೇತ ಕ್ರೀಡಾಪಟುಗಳು ಆಧಾರ ಕಾರ್ಡ್, ಬ್ಯಾಂಕ್ ಪಾಸ್‌ಬುಕ್ ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಭಾಗವಹಿಸುವ ಕ್ರೀಡಾಪಟುಗಳಿಗೆ ಯಾವ ವಯಸ್ಸಿನ ನಿರ್ಬಂಧವಿಲ್ಲ. ತಾಲೂಕು ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಯಾವುದೇ ಪ್ರಯಾಣಭತ್ಯೆ ಹಾಗೂ ದಿನಭತ್ಯೆ ಇರುವುದಿಲ್ಲ.

**ವೈಯಕ್ತಿಕ ಸ್ಪರ್ಧೆಗಳು:** ಪುರುಷರಿಗೆ ಅಥ್ಲೆಟಿಕ್ಸ್ (100,200,400,800, 1500,5000,10000 ಮೀ.ಓಟ) ಉದ್ದ ಜಿಗಿತ, ಎತ್ತರ ಜಿಗಿತ, ತ್ರಿವಿಧ ಜಿಗಿತ, ಗುಂಡು ಎಸೆತ, ಚಕ್ರ ಎಸೆತ, ಭಲ್ಲೆ ಎಸೆತ. 110ಮಿ. ಹಡಲ್ಸ್ 4*100ರಿಲೇ, 4*400ರಿಲೇ. ಇರುತ್ತವೆ. ಮಹಿಳೆಯರಿಗೆ ಅಥ್ಲೆಟಿಕ್ಸ್(100,200, 400,800,1500,3000ಮೀ.ಓಟ) ಉದ್ದ ಜಿಗಿತ, ಎತ್ತರ ಜಿಗಿತ, ತ್ರಿವಿಧ ಜಿಗಿತ, ಗುಂಡು ಎಸೆತ, ಚಕ್ರ ಎಸೆತ, ಭಲ್ಲೆ ಎಸೆತ. 100ಮಿ. ಹಡಲ್ಸ್, 4*100 ರಿಲೆ, 4*400 ರಿಲೇ ಇರುತ್ತವೆ.

**ಗುಂಪು ಸ್ಪರ್ಧೆಗಳು:** ಪುರುಷರಿಗೆ ವಾಲಿಬಾಲ್, ಕಬಡ್ಡಿ, ಖೋಖೋ, ಫುಟಬಾಲ್ ಥ್ರೋಬಾಲ್, ಯೋಗ ಮತ್ತು ಮಹಿಳೆಯರಿಗೆ ವಾಲಿಬಾಲ್, ಕಬಡ್ಡಿ, ಖೋಖೋ, ಫುಟಬಾಲ್, ಥ್ರೋಬಾಲ್, ಯೋಗ ಇರುತ್ತವೆ.

**ನೋಂದಣಿ ಮತ್ತು ಹೆಚ್ಚಿನ ಮಾಹಿತಿಗಾಗಿ:** ಶ್ರೀ ಶರಣಬಸವ ಬಂಡಿಹಾಳ ತಾಲೂಕು ಯುವ ಸಬಲೀಕರಣ ಮತ್ತು ಕ್ರೀಡಾಧಿಕಾರಿ ಕೊಪ್ಪಳ ಮೊ.9591292420 ಹಾಗೂ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ ಮಳೇಮಲ್ಲೇಶ್ವರ ರಸ್ತೆ ಕೊಪ್ಪಳ ಅಥವಾ ಹೆಚ್ಚಿನ ಮಾಹಿತಿಗಾಗಿ ಈ ಕಚೇರಿಗೆ ಸಂಪರ್ಕಿಸಿ.

# ಕಟ್ಟಡ ಕಾರ್ಮಿಕರಿಗೆ ಟೂಲ್‌ಕಿಟ್ ವಿತರಣೆ; ನೋಂದಣಿಗೆ ಆಹ್ವಾನ

ಮೊದಲ ಪುಟದಿಂದ

ಅರ್ಹ ಕಟ್ಟಡ ಕಾರ್ಮಿಕರು ಆಯಾ ಕಾರ್ಮಿಕ ನಿರೀಕ್ಷಕರ ಕಚೇರಿಯಲ್ಲಿ ನೋಂದಾಯಿಸಕೊಳ್ಳಬೇಕು ಎಂದು ಜಿಲ್ಲಾ ಕಾರ್ಮಿಕ ಅಧಿಕಾರಿ ಸಿದ್ದಪ್ಪ ಜಿ.ಖೈನೂರು ಅವರು ತಿಳಿಸಿದ್ದಾರೆ.

ಈಗಾಗಲೇ ವಿವಿಧ ಟೂಲ್‌ಕಿಟ್ ಪಡೆದ ಕಾರ್ಮಿಕರನ್ನು ಹೊರತುಪಡಿಸಿ ಜೇಷ್ಠತೆ ಆಧಾರದಲ್ಲಿ ಮೇಸನ್ ಕಿಟ್, ವೆಲ್ಡಿಂಗ್ ಕಿಟ್, ರೋಡ್ ಕನ್ಸ್‌ಸ್ಟ್ರಕ್ಷನ್ ಕಿಟ್ ಮತ್ತು ಎಲೆಕ್ಟ್ರಿಷಿಯನ್ ಕಿಟ್ ಸೇರಿದಂತೆ ವಿವಿಧ ಟೂಲ್‌ಕಿಟ್‌ಗಳನ್ನು ವಿತರಿಸಲಾಗುವುದು.

ಅರ್ಹರು ತಮ್ಮ ಆಧಾರ್‌ಕಾರ್ಡ್, ಮೊಬೈಲ್ ಸಂಖ್ಯೆ ಹಾಗೂ ನೋಂದಾಯಿತ ಕಟ್ಟಡ ಕಾರ್ಮಿಕರ ಚಾಲ್ತಿಯಲ್ಲಿರುವ ಗುರುತಿನ ಚೀಟಿ ದಾಖಲೆಗಳನ್ನು ತಮ್ಮ ವ್ಯಾಪ್ತಿಯ ಕಾರ್ಮಿಕ ನಿರೀಕ್ಷಕರ ಕಚೇರಿಯಲ್ಲಿ ನೋಂದಾಯಿಸಿಕೊಳ್ಳಬೇಕು. ನೋಂದಾಯಿಸಿಕೊಳ್ಳಲು ಸೆ.27 ಕೊನೆಯ ದಿನವಾಗಿದೆ.

ಹೆಚ್ಚಿನ ಮಾಹಿತಿಗಾಗಿ ಆಯಾ ತಾಲ್ಲೂಕಿನ ಕಾರ್ಮಿಕ ನಿರೀಕ್ಷಕರ ಕಚೇರಿ ಹಾಗೂ ಕೌಲ್‌ಬಜಾರ್‌ನ ಮೊದಲನೇ ಗೇಟ್‌ನ ಮೊಹಮ್ಮದೀಯ ಕಾಲೇಜಿನ ಹಿಂಭಾಗದ ಬಳ್ಳಾರಿ ಉಪವಿಭಾಗದ ಜಿಲ್ಲಾ ಕಾರ್ಮಿಕ ಅಧಿಕಾರಿಗಳ ಕಚೇರಿಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

# ವಿದ್ಯಾರ್ಥಿ ಪ್ರೋತ್ಸಾಹ ಧನಕ್ಕಾಗಿ ಅರ್ಜಿ ಆಹ್ವಾನ

ಮೊಲದಲ ಪುಟದಿಂದ

ಪ್ರಸಕ್ತ ಶೈಕ್ಷಣಿಕ ಸಾಲಿಗೆ ಪರಿಶಿಷ್ಟ ಜಾತಿಯ ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರ ವಿದ್ಯಾರ್ಥಿ ವೇತನ ಹಾಗೂ ಪ್ರೋತ್ಸಾಹಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳು ಇಲಾಖೆಯ ಅಧಿಕೃತ ವೆಬ್‌ಸೈಟ್ www.sw.kar.nic.in ಅಥವಾ https://ssp.postmatric.karnataka.gov.in/homepage.aspx ಲಿಂಕ್‌ನಲ್ಲಿ ಅರ್ಜಿ ಸಲ್ಲಿಸಬಹುದು.

**ಸೂಚನೆಗಳು:** ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ, ಸ್ನಾತಕೋತ್ತರ ಪದವಿಗಳಲ್ಲಿ ವ್ಯಾಸಂಗ ಮಾಡಿ ಪ್ರಥಮ ಬಾರಿಗೆ, ಪ್ರಥಮ ಪ್ರಯತ್ನದಲ್ಲಿ ಪಾಸಾದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ಪ್ರೋತ್ಸಾಹ ಧನಕ್ಕಾಗಿ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.

ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಕ್ಕೆ ಹಿಂದಿನ ಸಾಲಿನಲ್ಲಿ ಅರ್ಜಿ ಸಲ್ಲಿಸಿ ವಿದ್ಯಾಥಿವೇತನ ಪಡೆದ ವಿದ್ಯಾರ್ಥಿಗಳು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ. ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಕ್ಕೆ ಹಿಂದಿನ ಸಾಲಿನಲ್ಲಿ ಅರ್ಜಿ ಸಲ್ಲಿಸದೇ ಇರುವ ವಿದ್ಯಾರ್ಥಿಗಳು ಪ್ರಸಕ್ತ ಸಾಲಿಗೆ ಅರ್ಜಿ ಸಲ್ಲಿಸಬಹುದು. ಕಳೆದ ಸಾಲಿನಲ್ಲಿ ವಿವಿಧ ಕಾರಣಗಳಿಂದ ವಿದ್ಯಾರ್ಥಿ ವೇತನ ಮಂಜೂರಾಗದ ಹಾಗೂ ರಿಜೆಕ್ಟ್ ಆಗಿರುವ ವಿದ್ಯಾರ್ಥಿಗಳು ಮಾತ್ರ ಪ್ರಸಕ್ತ ಸಾಲಿನಲ್ಲಿ ಮತ್ತೊಮ್ಮೆ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.

ವಿದ್ಯಾರ್ಥಿಗಳು ತಮ್ಮ ಬ್ಯಾಂಕ್ ಖಾತೆಗಳಿಗೆ ಎನ್‌ಪಿಸಿಐ ಆಧಾರ್ ಸೀಡಿಂಗ್ ಮಾಡಿಸಿರಬೇಕು. ತೊಂದರೆಯಿದ್ದಲ್ಲಿ ಅಂಚೆ ಕಚೇರಿಯಲ್ಲಿ ಖಾತೆಯನ್ನು ತೆರೆಯಬೇಕು. ಮೆಟ್ರಿಕ್ ನಂತರದ ವಿದ್ಯಾರ್ಥಿಗಳು ಪ್ರತಿ ಶೈಕ್ಷಣಿಕ ಸಾಲಿಗೆ ಆನ್‌ಲೈನ್ ಅರ್ಜಿ ಸಲ್ಲಿಸಬಹುದು.

ಪ್ರಸಕ್ತ ಸಾಲಿನಿಂದ ಪ್ರತಿ ಶಾಲಾ ಮುಖ್ಯೋಪಾಧ್ಯಾಯರು, ಹಾಗೂ ಕಾಲೇಜು ಪ್ರಾಂಶುಪಾಲರು ಗಳಿಗೆ ಸಬಲೀಕರಣ ಅಧಿಕಾರಿ ಅಥವಾ ಸಂಸ್ಥೆಯ ನೋಡಲ್ ಅಧಿಕಾರಿಯನ್ನು ನಿಯೋಜಿಸಿದ್ದು, ತಾಲ್ಲೂಕು ಲಾಗಿನ್‌ನಲ್ಲಿ ಸೇರ್ಪಡೆ ಮಾಡಿಕೊಳ್ಳಲು ಕ್ರಮವಹಿಸಬೇಖು. ನಂತರ ಸೇರ್ಪಡೆಯಾದ ಅಧಿಕಾರಿಗಳ ಇ–ಕೆವೈಸಿ ವಿವರಗಳನ್ನು ಅಪ್ಡೇಟ್ ಮಾಡಿ ಅಪ್ರೂವ್ ಮಾಡುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಸಂಡೂರಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಗೆ ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ವೆಂಕಟೇಶ್ ಎನ್.ಕೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# 3 ದಿನ ಕಮ್ಮಟ: ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಹೊಸಪೇಟೆ

ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಹಾವೇರಿ ಜಿಲ್ಲೆಯಲ್ಲಿ 3 ದಿನಗಳ ಕಮ್ಮಟ ನಡೆಸಲಾಗುತ್ತಿದ್ದು, ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಹಾವೇರಿ ಜಿಲ್ಲೆಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಗಿರಿಜನ ಉಪಯೋಜನೆಯಡಿ ಕನ್ನಡ ಸಾಹಿತ್ಯ ಮತ್ತು ಸಾಂವಿಧಾನಿಕ ಮೌಲ್ಯಗಳು ಎಂಬ ಹೆಸರಿನಲ್ಲಿ 3 ದಿನಗಳ ಕಮ್ಮಟವನ್ನು ಅಕ್ಟೋಬರ್ ಕೊನೆಯ ವಾರದಲ್ಲಿ ಹಾವೇರಿ ಜಿಲ್ಲೆಯ ಗೋಟಗೋಡಿಯಲ್ಲಿರುವ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಲ್ಲಿ ನಡೆಸಲು ಉದ್ದೇಶಿಸಿದೆ.

ಆಸಕ್ತಿಯಿರುವ 20 ರಿಂದ 45 ವರ್ಷ ವಯಸ್ಸುಳ್ಳ ಪರಿಶಿಷ್ಟ ಪಂಗಡಕ್ಕೆ ಸೇರಿದ ರಾಜ್ಯದ ಎಲ್ಲಾ ಭಾಗದ ಅಭ್ಯರ್ಥಿಗಳು ಅರ್ಜಿಸಲ್ಲಿಸಬಹುದು. ಅರ್ಜಿಸಲ್ಲಿಸಲು ಅಕ್ಟೋಬರ್ 08 ಕೊನೆಯ ದಿನವಾಗಿದ್ದು, ಆಸಕ್ತ ಅಭ್ಯರ್ಥಿಗಳು ಕರ್ನಾಟಕ ಸಾಹಿತ್ಯ ಅಕಾಡೆಮಿಯ ವೆಬ್‌ಸೈಟ್ http://karnatakasahithyaacademy.org ಯಿಂದ ಅರ್ಜಿ ನಮೂನೆ ಹಾಗೂ ವಿವರಗಳನ್ನು ಪಡೆದುಕೊಳ್ಳಬಹುದಾಗಿದೆ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ರಿಜಿಸ್ಟ್ರಾರ್ ಕರಿಯಪ್ಪ ಎನ್ ತಿಳಿಸಿದ್ದಾರೆ.

# ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ: ಅರ್ಜಿ ಸಲ್ಲಿಕೆ

■ ಹಂಪಿ ಟೈಮ್ಸ್ ಬಳ್ಳಾರಿ

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ಪ್ರಸ್ತಕ ಸಾಲಿನಲ್ಲಿ ಜಿಲ್ಲೆಯಲ್ಲಿ ನೋಂದಾಯಿತ ಮದರಸಾಗಳಿಗೆ ಔಪಚಾರಿಕ ಮತ್ತು ಗಣಕೀಕೃತ ಶಿಕ್ಷಣ ನೀಡಲು ಅನುದಾನ ಒದಗಿಸಲಾಗುತ್ತಿದ್ದು, ಅರ್ಹ ಮದರಸಾ ಸಂಸ್ಥೆಗಳಿಂದ ಈಗಾಗಲೇ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಕೆಯ ಅವಧಿಯನ್ನು ಅಕ್ಟೋಬರ್ 15 ರ ವರೆಗೆ ವಿಸ್ತರಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳ ಕಚೇರಿ ಅಥವಾ ದೂ.08392–200125, 224 ಹಾಗು ಜಿಲ್ಲೆಯ ಎಲ್ಲಾ ಅಲ್ಪಸಂಖ್ಯಾತರ ತಾಲೂಕು ಮಾಹಿತಿ ಕೇಂದ್ರಗಳಿಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದು.

ಹೆಚ್ಚಿನ ವಿವರಗಳಿಗಾಗಿ http://dom.karnataka.gov.in ಲಿಂಕ್ ನೋಡಬಹುದು ಮತ್ತು ಸಹಾಯವಾಣಿ ಮೊ.8277799990 ಗೆ ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ವಿಟೋಬಾ ಹೊನಕಾಂಡೆ ಅವರು ಪ್ರಕಣೆಯಲ್ಲಿ ತಿಳಿಸಿದ್ದಾರೆ.

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಭಾದ್ರಪದ । ಸಂವತ್ಸರ: ಕ್ರೋಧಿ

**20–09–2024 – ಶುಕ್ರವಾರ**

| | |
|---|---|
| ತಿಥಿ | : ತೃತಿಯ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಅಶ್ವಿನಿ |
| ಯೋಗ | : ಧ್ರುವ |
| ಕರಣ | : ವಾಣಿಜ |
| ಸೂರ್ಯೋದಯ | : 06:16:10 |
| ಸೂರ್ಯಾಸ್ತ | : 18:23:54 |
| ರಾಹು ಕಾಲ | : 10:49–12:20 |
| ಯಮಘಂಡ ಕಾಲ | : 15:22–16:53 |
| ಗುಳಿಕ ಕಾಲ | : 07:47–09:18 |

## ತುಂಗಭದ್ರಾ ನೀರಿನ ಮಟ್ಟ



ಗುರುವಾರ : 19–09–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1632.00 ಅಡಿ |
| ಒಳ ಹರಿವು | 10687 ಕ್ಯುಸೆಕ್ |
| ಹೊರ ಹರಿವು | 10147 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 101.773 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1620.74 ಅಡಿ |
| ಒಳ ಹರಿವು | 2109 ಕ್ಯುಸೆಕ್ |
| ಹೊರ ಹರಿವು | 9961 ಕ್ಯುಸೆಕ್ |
| ಸಾಮರ್ಥ್ಯ | 63.428 ಟಿಎಂಸಿ |

# ಗರ್ಭಿಣಿ ಮಹಿಳೆಯರ ನವಜಾತ ಶಿಶುವಿನ ತಪಾಸಣೆ ನಿರ್ಲ್ಯಕ್ಷಿಸದಿರಿ

**ಡಿಹೆಚ್‌ಓ ಡಾ.ವೈ ರಮೇಶಬಾಬು ಹೇಳಿಕೆ | ಶಿಶು, ತಾಯಿ ಮರಣ ಕುರಿತ ಪರಿಶೀಲನಾ ಸಮಿತಿ ಸಭೆ**



■ **ಹಂಪಿ ಟೈಮ್ಸ್ ಬಳ್ಳಾರಿ**
ಗರ್ಭಿಣಿ ಮಹಿಳೆಯರ ಮತ್ತು ನವಜಾತ ಶಿಶುವಿಗೆ ಮಾಡಿಸಬೇಕಾದ ತಪಾಸಣೆಗಳನ್ನು ನಿರ್ಲ್ಯಕ್ಷಿಸುವಂತಿಲ್ಲ. ಶಿಶು ಮರಣ ಹಾಗೂ ತಾಯಿ ಮರಣ ತಡೆಗೆ ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿಯವರು ಕಾರ್ಯಪ್ರವೃತ್ತರಾಗಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ ರಮೇಶಬಾಬು ಹೇಳಿದರು.

ಬುಧವಾರದಂದು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯದ ಸಭಾಂಗಣದಲ್ಲಿ ಏರ್ಪಡಿಸಿದ್ದ ಶಿಶು ಹಾಗೂ ತಾಯಿ ಮರಣ ಕುರಿತ ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು.

ಮನೆ ಭೇಟಿಯ ಮೂಲಕ ಕುಟುಂಬದ ಸದಸ್ಯರಿಗೆ ಅವರ ವೈಯಕ್ತಿಕ ಕೆಲಸಗಳ ಕಾರಣದಿಂದ ತಪಾಸಣೆಗೆ ವಿಳಂಬ ಮಾಡದಂತೆ ಮನವೊಲಿಸುವ ಕಾರ್ಯ ಮಾಡಬೇಕು ಎಂದರು.

ಗಂಡಾಂತರ ಗರ್ಭಿಣಿಯರು ಎಂದು ಗುರುತಿಸಿದ ನಂತರ ನಿರಂತರ ನಿಗಾವಣೆ ಕೈಗೊಳ್ಳಬೇಕು. ರಕ್ತದೊತ್ತಡ ಪರೀಕ್ಷೆಯಲ್ಲಿ ವ್ಯತ್ಯಾಸ ಕಂಡು ಬಂದಲ್ಲಿ ಉಪಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪರಿಶೀಲಿಸಿ ಅಗತ್ಯವೆನಿಸಿದಲ್ಲಿ ತಜ್ಞ ವೈದ್ಯರಲ್ಲಿ ತಕ್ಷಣವೇ ಕಳುಹಿಸಬೇಕೆದು ತಿಳಿಸಿದರು.

ರಕ್ತಹೀನತೆ ಕಂಡುಬಂದಲ್ಲಿ ಸ್ಥಳೀಯವಾಗಿ ನೀಡುವ ಚಿಕಿತ್ಸೆಯಿಂದ (ಐಎಫ್‌ಎ ಮಾತ್ರೆ, ಐರನ್ ಸುಕ್ರೋಸ್, ರಕ್ತ ಹಾಕಿಸುವಿಕೆ) ಸುಧಾರಣೆಯಾಗದಿದ್ದಲ್ಲಿ ತಜ್ಞರ ಬಳಿ ಕಳುಹಿಸಬೇಕು. ಅಗತ್ಯವಿದ್ದಲ್ಲಿ ಸ್ಕ್ಯಾನ್ ಮಾಡಿಸಲು ಸೂಚಿಸಿದ್ದಾರೆ.

ಮೊದಲ ಹೆರಿಗೆ ಶಸ್ತ್ರಚಿಕಿತ್ಸೆ ಮೂಲಕವಾದಲ್ಲಿ ಪುನಃ ಗರ್ಭಿಣಿಯಾಗುವ ಅವಧಿಯನ್ನು ಕನಿಷ್ಟ 3 ವರ್ಷಕ್ಕೆ ಕಡ್ಡಾಯವಾಗಿ ಮುಂದೂಡಬೇಕು. ಇದಕ್ಕಾಗಿ ಅಂತರ ಚುಚ್ಚುಮದ್ದು, ಕಾಪರ–ಟಿ, ನೀರೊಧ ಕುರಿತು ಸಮುದಾಯದಲ್ಲಿ ಆರೋಗ್ಯ ಶಿಕ್ಷಣ ನೀಡಬೇಕು. ಅತಿ ಮುಖ್ಯವಾಗಿ ಗರ್ಭಿಣಿಗೆ ಮೇಲ್ಮಟ್ಟದ ಆಸ್ಪತ್ರೆಗೆ ಶಿಫಾರಸ್ಸು ಮಾಡುವಾಗ 108 ಆರೋಗ್ಯ ಕವಚ ಬರುವ ಸಮಯ ತಡವಾಗುವ ಸಂದರ್ಭದಲ್ಲಿ ತಕ್ಷಣವೇ ವೈದ್ಯಾಧಿಕಾರಿಗಳು ಪರ್ಯಾಯ ಸಾರಿಗೆ ವ್ಯವಸ್ಥೆ ಮಾಡಬೇಕು ಎಂದು ಡಿಹೆಚ್‌ಒ ಅವರು ಹೇಳಿದರು.

ಹೆರಿಗೆ ವಿಷಯವನ್ನು ಆದ್ಯತೆಯಾಗಿಟ್ಟುಕೊಂಡು ಸ್ಥಳೀಯ ಗ್ರಾಮ ಪಂಚಾಯತ್ ಅಧ್ಯಕ್ಷರು ಹಾಗೂ ಸದಸ್ಯರೊಂದಿಗೆ ಸಮನ್ವಯ ಸಭೆ ಕೈಗೊಳ್ಳಬೇಕು. ತಮ್ಮ ವ್ಯಾಪ್ತಿಯ ಗರ್ಭಿಣಿಯರ ಆರೈಕೆ ಕುರಿತು ನಿಗಾವಹಿಸಲು ಕ್ರಮವಹಿಸಬೇಕು ಎಂದರು.

ವಿಮ್ಸ್ ಪ್ರಸೂತಿ ವಿಭಾಗದ ಮುಖಸ್ಥ ಡಾ. ಆಶಾರಾಣಿ ಅವರು ಮಾತನಾಡಿ ವೈದ್ಯಾಧಿಕಾರಿಗಳು ತಮ್ಮ ಸಿಬ್ಬಂದಿ ಹಾಗೂ ಆಶಾ ಕಾರ್ಯಕರ್ತೆಯರೊಂದಿಗೆ ಗಂಡಾಂತರ ಗರ್ಭಿಣಿಯರ ಮನೆ ಭೇಟಿ ಹಾಗೂ ಆರೋಗ್ಯದ ಸ್ಥಿತಿ ಕುರಿತು ಪ್ರತಿವಾರ ಚರ್ಚಿಸಲು ಆದ್ಯತೆಯಾಗಬೇಕು ಎಂದುನೀಡಿದರು.

ಗರ್ಭಿಣಿಯರು ತಮ್ಮ ಆರೋಗ್ಯ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಧಾರ್ಮಿಕ ಸ್ಥಳಗಳಿಗೆ ಭೇಟಿ ನೀಡುತ್ತಿದ್ದರೆ, ಧಾರ್ಮಿಕ ಕೇಂದ್ರಗಳಿಗೆ ಭೇಟಿ ನೀಡಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಸೂಚಿಸಬೇಕು ಎಂದರು.

ಆಕಸ್ಮಿಕ ಘಟನೆಗಳಲ್ಲಿ ಗರ್ಭಿಣಿಯರ ಆರೈಕೆಗೆ ಯಾರು ಇಲ್ಲದಿದ್ದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಮಾಹಿತಿ ತಿಳಿಸಿ ಆರೈಕೆ ಕೇಂದ್ರಕ್ಕೆ ಕಳುಹಿಸಲು ವ್ಯವಸ್ಥೆ ಒದಗಿಸಬೇಕು ಎಂದು ಹೇಳಿದರು.

ಸಭೆಯಲ್ಲಿ ವಿಮ್ಸ್ ಪ್ರಸೂತಿ ತಜ್ಞೆ ಡಾ.ಆಶಾರಾಣಿ, ವಿಮ್ಸ್ ಮಕ್ಕಳ ವಿಭಾಗದ ಮುಖ್ಯಸ್ಥ ಡಾ.ವಿಶ್ವನಾಥ, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಹನುಮಂತಪ್ಪ, ಜಿಲ್ಲಾ ಆಸ್ಪತ್ರೆ ಪ್ರಸೂತಿ ತಜ್ಞ ಡಾ.ಅಶ್ರಫ್ ಅಲಿ, ಮಕ್ಕಳ ತಜ್ಞ ಡಾ.ಬಾಲು ವೆಂಕಟೇಶಲು, ವಿಮ್ಸ್ ಎಸ್‌ಎನ್‌ಸಿಯು ನೋಡಲ್ ಅಧಿಕಾರಿ ಡಾ. ರಾಜೇಶ್.ಡಿ ಸೇರಿದಂತೆ ಡಾ.ಈರಣ್ಣ, ಡಾ. ಮಂಜುನಾಥ ಜವಳಿ, ಡಾ.ಅರುಣಕುಮಾರ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನ, ಡಿಎನ್‌ಓ ಗಿರೀಶ್ ಹಾಗೂ ವೈದ್ಯಾಧಿಕಾರಿಗಳು, ಪಿಹೆಚ್‌ಸಿಓ, ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

# ಸೆ.21ಕ್ಕೆ ತಿಂಗಳ ಸೊಬಗು ಸಾಂಸ್ಕೃತಿಕ ಕಾರ್ಯಕ್ರಮ

**ಮೊದ ಪುಟದಿಂದ**
ಸಂಜೆ 6.30 ಗಂಟೆಗೆ ನಗರದ ಡಾ.ರಾಜ್‌ಕುಮಾರ್ ರಸ್ತೆಯ ಸಾಂಸ್ಕೃತಿಕ ಸಮುಚ್ಚಯ ಆವರಣದ ನಾಡೋಜ ಸುಭದ್ರಮ್ಮ ಬಯಲು ರಂಗಮಂದಿರದಲ್ಲಿ ಆಯೋಜಿಸಲಾಗಿದೆ.

ಈ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸರ್ಕಾರಿ ಬಾಲಕಿಯರ ಬಾಲ ಮಂದಿರ ವತಿಯಿಂದ ಜಾನಪದ ನೃತ್ಯ ಇರಲಿದೆ. ಬಳ್ಳಾರಿ ತಾಲ್ಲೂಕಿನ ಇಬ್ರಾಹಿಂಪುರ ಗ್ರಾಮದ ಎಸ್.ಹೆಚ್ ಹುಲುಗಪ್ಪ ಮತ್ತು ಸಂಗಡಿಗರು ಜಾನಪದ ಗೀತೆಗಳನ್ನು ಪ್ರಸ್ತುತ ಪಡಿಸುವರು.

ಬಳ್ಳಾರಿಯ ಶ್ರೀ ಲಕ್ಷ್ಮಿ ಕಲಾ ಟ್ರಸ್ಟ್ ವತಿಯಿಂದ ಕೂಚುಪುಡಿ ಮತ್ತು ಭರತನಾಟ್ಯ ಸಾಂಸ್ಕೃತಿಕ ಕಾರ್ಯಕ್ರಮಗಳು ಸಾದರಪಡಲಿವೆ. ಸ್ಥಳೀಯ ಮಟ್ಟದ ಕಲಾ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಪ್ರತಿ ತಿಂಗಳ ಮೂರನೇ ಶನಿವಾರ "ತಿಂಗಳ ಸೊಬಗು" ಸಾಂಸ್ಕೃತಕ ಕಾರ್ಯಕ್ರಮ ಆಯೋಜಿಸಲಾಗುತ್ತಿದ್ದು, ಕಲಾ ಪ್ರೇಕ್ಷರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಕೋರಿದ್ದಾರೆ.

# ರೈತರಿಗೆ ಪಟ್ಟಾ ನೀಡಿ

**ಮೊದಲ ಪುಟದಿಂದ**
ಮತ್ತು ತೆರಿಗೆ ರಶೀದಿಗಳನ್ನು ಸಹ ಹೊಂದಿದ್ದಾರೆ. ರೈತರು ಪಟ್ಟಾ ಪಡೆಯಲು ಮನವಿ ಪತ್ರ ಸಲ್ಲಿಸಿದ್ದಾರೆ. ಸಾಗುವಳಿ ಮಾಡುತ್ತಿರುವ ರೈತರಿಗೆ 2008 ರಲ್ಲಿ ಭೂ ನ್ಯಾಯ ಮಂಡಳಿಯಿಂದ ಪಟ್ಟಾ ಮಂಜೂರು ಮಾಡಲಾದ ರೈತರಿಗೆ ಪಟ್ಟಾ ನೀಡಬೇಕು. ರಾಜಾಪುರ ಶೋತ್ರಂ ಪರ್ಸನಲ್ ಇನಾಂ ಭೂಮಿಯನ್ನು ಮದ್ರಾಸ್ ಯ್ಯಾಕ್ಟ ಅಡಿಯಲ್ಲಿ ಸರ್ವೆ ಸೆಟ್ಲ್ ಮೆಂಟ್ ಅಧಿಕಾರಿಗಳು ಅನುಬಂಧ ಬಿ ಕೊಟ್ಟು ಇನ್ನೂಳಿದ ಗುಡ್ಡ ಮತ್ತು ಸಾಗುವಳಿ ಭೂಮಿ ಸೇರಿದಂತೆ ಗುಡ್ಡಪರಂಬೋಕು ಎಂದು ನಮೂದಿಸಿರುವ ಜಮೀನಿನಲ್ಲಿ ಸಾಗುವಳಿ ಮಾಡುತ್ತಿರುವ ರೈತರು ಫಾರಂ 57, ಮತ್ತು ಫಾರಂ 1, 1ಎ ಸಲ್ಲಿಸಲಾದ ಅರ್ಜಿಗಳನ್ನು ಪ್ರಸ್ತುತ ಭೂ ನ್ಯಾಯ ಮಂಡಳಿಯಲ್ಲಿ ಪಟ್ಟಾ ಪಹಣಿ ವಿತರಿಸಬೇಕು. 9 ವರ್ಷಗಳಿಂದ ನಿಂತು ಹೋಗಿರುವ ಸಕ್ಕರೆ ಕಾರ್ಖಾನೆಯನ್ನು ಶಾಸಕರು ಕೊಟ್ಟ ಮಾತಿನಂತೆ ತ್ವರಿತವಾಗಿ ಆರಂಭಿಸಬೇಕು. ಇಂಗಳಗಿ ಮತ್ತು ವಿವಿಧ ಗ್ರಾಮಗಳಲ್ಲಿ ಅನಾಧಿನಾ ಭೂಮಿಗೆ ಫಾರಂ 57 ಹಾಕಿದ ಅರ್ಜಿಗಳಿಗೆ ಪಟ್ಟಾ ಮಂಜೂರು ಮಾಡಬೇಕು ಎಂದು ಆಗ್ರಹಿಸಿ ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದರು. ಸಂಘಟನೆಯ ಮುಖಂಡರಾದ ದುರುಗೇಶ್, ಗಾಳೆಪ್ಪ, ಮಂಜುನಾಥ, ಎಂ.ಎಸ್.ಭರಮಪ್ಪ, ಕುದ್ರಿ ಚಿದಾನಂದಪ್ಪ, ಕೆ.ಸೋಮಪ್ಪ, ಮಲ್ಲಯ್ಯ, ಗೌರಿಶಂಕರ ಸೇರಿದಂತೆ ಇತರರು ಇದ್ದರು.

# ಕಾಳಿಕಾದೇವಿ ದೇವಸ್ಥಾನ ಅಭಿವೃದ್ದಿಗೆ ಎರಡು ಹಂತದಲ್ಲಿ 9ಲಕ್ಷ ರೂ ಅನುದಾನ

**ಶಾಸಕ ಕೆ.ನೇಮರಾಜ ನಾಯ್ಕ ಹೇಳಿಕೆ | 9ನೇ ವರ್ಷದ ವಿಶ್ವಕರ್ಮ ಜಯಂತ್ಯುತ್ಸವ**



■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**
ಪಟ್ಟಣದ ಕಾಳಿಕಾದೇವಿ ದೇವಸ್ಥಾನ ಅಭಿವೃದ್ದಿಗೆ 9ಲಕ್ಷ ರೂ.ಅನುದಾನವನ್ನು ಅತೀ ಶೀಘ್ರದಲ್ಲಿ ಒಟ್ಟು ಎರಡು ಹಂತಗಳಲ್ಲಿ ನೀಡುವುದಾಗಿ ಶಾಸಕ ಕೆ.ನೇಮರಾಜ ನಾಯ್ಕ ಭರವಸೆ ನೀಡಿದರು.

ಪಟ್ಟಣದ ವಿಶ್ವಕರ್ಮ ಸಮುದಾಯ ಭವನದಲ್ಲಿ ನಡೆದ 9ನೇ ವರ್ಷದ ವಿಶ್ವಕರ್ಮ ಜಯಂತ್ಯುತ್ಸವಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ವಿಶ್ವಕರ್ಮ ಸಮಾಜದ ಯುವಕರು ಪಾರಂಪರಿಕ ವೃತ್ತಿಯ ಜತೆಗೆ ಶೈಕ್ಷಣಿಕ ಪ್ರಗತಿ ಸಾಧಿಸಬೇಕು. ಸಮಾಜದ ವಿದ್ಯಾರ್ಥಿಗಳು ಉನ್ನತ ಹುದ್ದೆಗಳನ್ನು ಅಲಂಕರಿಸುವಂತಾಗಬೇಕು. ಸಮಾಜದ ಬಡ ವಿದ್ಯಾರ್ಥಿಗಳಿಗೆ ಅಗತ್ಯ ನೆರವು ನೀಡಲಾಗುವುದು. ಕಾಳಿಕದೇವಿ ದೇಗುಲದ ಪ್ರಗತಿಗೆ 2ಹಂತಗಳಲ್ಲಿ ಅನುದಾನ ನೀಡಲಾಗುವುದು ಎಂದರು.

ವಿಶ್ವಕರ್ಮ ಯುವಕ ಸಂಘವನ್ನು ಉದ್ಘಾಟಿಸಿ, ವಿಶ್ವ ಕರ್ಮ ಸಮಾಜ ಜನಾಂಗ ಶೈಕ್ಷಣಿಕವಾಗಿ,ಆರ್ಥಿಕವಾಗಿ,ಸಮಾಜಿಕವಾಗಿ ಹಾಗೂ ರಾಜಕೀಯವಾಗಿ ಮುಂದೆ ಬರಬೇಕೆಂದರು ಕರೆ ನೀಡಿದರು,

ಹಾಲಶಂಕರ ಸ್ವಾಮೀಜಿ ಸಾನ್ನಿಧ್ಯವಹಿಸಿ ಮಾತನಾಡಿದರು. ಕಲ್ಲಹಳ್ಳಿ ಪುರೋಹಿತ ಬಸವರಾಜ್ ವೀರಬ್ರಹ್ಮ, ಸಮಾಜದ ಗೌರವಾಧ್ಯಕ್ಷ ಸಿ.ಎಚ್.ಸಿದ್ದರಾಜು, ಪ್ರಧಾನ ಕಾರ್ಯದರ್ಶಿ ಕುಮಾರ್ ಆಚಾರ್, ಯುವಘಟಕದ ಅಧ್ಯಕ್ಷ ಕಮ್ಮಾರ್ ಮಂಜುನಾಥ್. ಮಾಜಿ ಅಧ್ಯಕ್ಷ ಬಿ.ಜಿ.ಬಡಿಗೇರ, ಬಡಿಗೇರ ಸಿದ್ದಪ್ಪ,ಲಿಂಗಪ್ಪ, ಸಿದ್ದರಾಮ ಆಚಾರ್, ಜಿಲ್ಲಾ ಘಟಕದ ಉಪಾಧ್ಯಕ್ಷ ವೀರಣ್ಣಾಚಾರ್, ಯುವ ಘಟಕದ ಉಪಾಧ್ಯಕ್ಷ ವೀರೇಶ, ಬಸವರಾಜ. ಮೃತ್ಯುಂಜಯ, ರಾಘವೇಂದ್ರ, ಮೌನೇಶ. ಸಂತೋಷ್, ಮಂಜುನಾಥ, ಪ್ರಕಾಶ ಇತರರಿದ್ದರು. ಉಪನ್ಯಾಸಕ ಕುಮಾರ್ ಆಚಾರ್, ಮೌನೇಶ್ ಆಚಾರ್ ನಿರ್ವಹಿಸಿದರು.

# ಮದ್ಯವರ್ತಿಗಳ ಆಮಿಷಕ್ಕೆ ಒಳಗಾಗದಿರಿ

■ **ಹಂಪಿ ಟೈಮ್ಸ್ ಹೊಸಪೇಟೆ**
ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ನೇಮಕಾತಿ, ಮುಂಬಡ್ತಿ ಮತ್ತು ಸ್ಥಾನಪಲ್ಲಟಕ್ಕಾಗಿ ಸಾರ್ವಜನಿಕರು ಮದ್ಯವರ್ತಿಗಳಿಗೆ ಹಣ ನೀಡಿ ಮೋಸ ಹೋಗಬಾರದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

ಜಿಲ್ಲೆಯ 5 ತಾಲೂಕಿನಲ್ಲಿ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ನೇಮಕಾತಿ ಮಾಡಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ನೇಮಕಾತಿ ಪ್ರಕ್ರಿಯೆಯು ಆನ್‌ಲೈನ್ ಮೂಲಕ ಅರ್ಜಿ ಪರಿಶೀಲಿಸಿ ಜಿಲ್ಲಾ ನೇಮಕಾತಿ ಸಮಿತಿಯ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನೇಮಕಾತಿ ಮಾಡಲಾಗುವುದು.

ನೇಮಕಾತಿಯ ವಿಚಾರದಲ್ಲಿ ಮಧ್ಯವರ್ತಿ ಹಾಗೂ ಕೆಲವು ಸಂಘಟನೆಯ ಹೆಸರುಗಳನ್ನು ಬಳಸಿಕೊಂಡು ಸಾರ್ವಜನಿಕರಲ್ಲಿ ನೇಮಕಾತಿ ಮಾಡಿಕೊಡುತ್ತೇವೆ ಎಂದು ಹಣ ವಸೂಲಿ ಮಾಡುತ್ತಿರುವುದು ಮತ್ತು ಅಧಿಕಾರಿಗಳಲ್ಲಿ ಹಣದ ಆಮಿಷ ತೋರಿಸಿ ನೇಮಕಾತಿ ಮಾಡುವಂತೆ ಮಧ್ಯವರ್ತಿಗಳು ನೇಮಕಾತಿ ಪ್ರಕ್ರಿಯೇಯಲ್ಲಿ ಭಾಗವಹಿಸುತ್ತಿದ್ದಾರೆ ಎಂದು ಕೇಳಿ ಬರುತ್ತಿದೆ.

ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ನೇಮಕಾತಿಯು ಇಲಾಖೆಯ ಮಾರ್ಗಸೂಚಿಯಂತೆ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಿ ತಾಲೂಕು ಮಟ್ಟದ ತಹಶಿಲ್ದಾರರ ಅಧ್ಯಕ್ಷತೆಯಲ್ಲಿ ಪರಿಶೀಲನಾ ಸಮಿತಿ ಪರಿಶೀಲಿಸಿದ ನಂತರ ಜಿಲ್ಲಾ ಮಟ್ಟಕ್ಕೆ ಪರಿಶೀಲನಾ ಸಮಿತಿಯ ನಡಾವಳಿಯೊಂದಿಗೆ ಜಿಲ್ಲಾ ಉಪನಿರ್ದೇಶಕರ ಕಚೇರಿಗೆ ಸಲ್ಲಿಸಲಾಗುವುದು, ಅದರಂತೆ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತಾಲೂಕು ಮಟ್ಟದ ಸಭಾನಡಾವಳಿಯೊಂದಿಗೆ ಸಲ್ಲಿಸಿದ ನೇಮಕಾತಿ ಅರ್ಜಿಗಳನ್ನು ಪರಿಶೀಲಿಸಿ ಮುಂದಿನ ಸಮಿತಿಯ ತೀರ್ಮಾನದಂತೆ ಅಗತ್ಯಕ್ರಮವಹಿಸಲಾಗುವುದು. ಹಾಗೂ ಸಹಾಯಕಿ ಹುದ್ದೆಯಿಂದ ಕಾರ್ಯಕರ್ತೆ ಹುದ್ದೆಗೆ ಮುಂಬಡ್ತಿಗೆ ಹಾಗೂ ಸ್ಥಾನಪಲ್ಲಟಕ್ಕೆ ಅರ್ಹವಿರುವ ಪ್ರಸ್ತಾವನೆಗಳನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಏಕ ಕಡತದಲ್ಲಿ ಅಗತ್ಯ ದಾಖಲಾತಿಯೊಂದಿಗೆ ತಮ್ಮ ಕಚೇರಿಯ ಟಿಪ್ಪಣಿಯೊಂದಿಗೆ ಪ್ರಸ್ತಾವನೆಯನ್ನು ಜಿಲ್ಲಾ ಕಚೇರಿಗೆ ಸಲ್ಲಿಸಿ, ನಂತರ ಜಿಲ್ಲಾಧಿಕಾರಿ ಅನುಮೋದನೆ ಪಡೆದು ಮುಂದಿನ ಅಗತ್ಯಕ್ರಮ ವಹಿಸಲಾಗುತ್ತದೆ.

ಮುಂಬಡ್ತಿ, ಸ್ಥಾನಪಲ್ಲಟ ಮತ್ತು ನೇಮಕಾತಿಯು ಸಂಪೂರ್ಣ ಪಾರದರ್ಶಕತೆಯಿಂದ ಕೂಡಿರುತ್ತದೆ. ಸಾರ್ವಜನಿಕರು ಯಾವುದೇ ಮೋಸದ ಜಾಲಕ್ಕೆ ಒಳಗಾಗಬಾರದುಎಂದು ಮಹಿಳಾ, ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯಾಲಯದ ತಿಳಿಸಿದೆ.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi
ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ವಿಜ್ಞಾನ

**ನಿಮ್ಮ ಕಲಿಕಾ ಸಾಮರ್ಥ್ಯವನ್ನು ಪರೀಕ್ಷಿಸಿಕೊಳ್ಳಿ**
**10ನೇ ತರಗತಿ ವಿಜ್ಞಾನ (83K)**
**ಮಾದರಿ ಪ್ರಶ್ನೆ ಪತ್ರಿಕೆ– 2**

**ಸಮಯ : 40 ನಿಮಿಷಗಳು** **ಅಂಕಗಳು : 20**

ಈ ಕೆಳಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. 4X1=4

1. ನರಾವೇಗಗಳು ಹಾದುಹೋಗುವ ಸರಿಯಾದ ಮಾರ್ಗ
   a. ಡೆಂಡ್ರೈಟ್ ಗಳು → ಆಕ್ಸಾನ್ → ಕೋಶಕಾಯ → ನರತುದಿ
   b. ಡೆಂಡ್ರೈಟ್ ಗಳು → ಕೋಶಕಾಯ → ಆಕ್ಸಾನ್ → ನರತುದಿ
   c. ಕೋಶಕಾಯ → ಆಕ್ಸಾನ್ → ಡೆಂಡ್ರೈಟ್ ಗಳು → ನರತುದಿ
   d. ನರತುರಿ → ಆಕ್ಸಾನ್ → ಕೋಶಕಾಯ → ಡೆಂಡ್ರೈಟ್ ಗಳು
2. ಈ ಕೆಳಗಿನವುಗಳಲ್ಲಿ ತಪ್ಪಾದ ಹೇಳಿಕೆಯನ್ನು ಗುರುತಿಸಿ.
   a. ಅಡುಗೆ ಸೋಡಾವನ್ನು ಬೇಕಿಂಗ್ ಪುಡಿಯ ತಯಾರಿಕೆಯಲ್ಲಿ ಬಳಸುತ್ತಾರೆ
   b. ಚೆಲುವೆ ಪುಡಿಯನ್ನು ನೀರಿನ ಶಾಶ್ವತ ಗಡಸುತನ ನಿವಾರಣೆಗೆ ಬಳಸುತ್ತಾರೆ.
   c. ನುಣುಪಾತ ಮೇಲ್ಮೈ ನಿರ್ಮಿಸಲು ಪ್ಲಾಸ್ಟರ್ ಆಫ್ ಪ್ಯಾರಿಸ್ ಅನ್ನು ಬಳಸುತ್ತಾರೆ.
   d. ಗೃಹಬಳಕೆಯ ಸ್ವಚ್ಛಕಾರಿಯಾಗಿ ವಾಷಿಂಗ್ ಸೋಡಾವನ್ನು ಉಪಯೋಗಿಸಬಹುದು.
3. $NaOH + HCl \rightarrow NaCl + H_2O$ ಈ ರಾಸಾಯನಿಕ ಸಮೀಕರಣ ಪ್ರತಿನಿಧಿಸುವ ಕ್ರಿಯೆಯನ್ನು ನಿರೂಪಿಸಿ.
4. ಬಲಗೈ ಹೆಬ್ಬೆರಳ ನಿಯಮವನ್ನು ಬರೆಯಿರಿ?

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. 2X3=6

5. ಕೆಳಗೆ ಸೂಚಿಸಿದ ಆಕಾರದ ವಾಹಕದ ಮೂಲಕ ವಿದ್ಯುತ್ ಪ್ರವಾಹವನ್ನು ಹಾಯಿಸಿದಾಗ ಉಂಟಾಗುವ ಕಾಂತೀಯ ಬಲ ರೇಖೆಗಳ ಲಕ್ಷಣಗಳನ್ನು ತಿಳಿಸಿ.
   a. ನೇರವಾದ ವಾಹಕದಲ್ಲಿ,
   b. ಒತ್ತೊತ್ತಾಗಿ ಸುತ್ತಿರುವ ಸಿಲಿಂಡರ್ ಆಕಾರದ ವಾಹಕ ಸುರಳಿಯಲ್ಲಿ,
   c. ವೃತ್ತಾಕಾರದ ವಾಹಕ ಸುರಳಿಯಲ್ಲಿ,
6. ಕ್ಲೋರ್–ಅಲ್ಕಲಿ ಪ್ರಕ್ರಿಯೆಯ ಉತ್ಪನ್ನಗಳನ್ನು ಹೆಸರಿಸಿ ? ಪ್ರತಿಯೊಂದು ಉತ್ಪನ್ನಗಳ ಎರಡು ಉಪಯೋಗಗಳನ್ನು ಬರೆಯಿರಿ?

ಅಥವಾ

"ಲೋಹದ ಕಾರ್ಬೋನೇಟ್ ನೊಂದಿಗೆ ಆಮ್ಲವು ವರ್ತಿಸಿದೆ".
   a. ಈ ಕ್ರಿಯೆಯಲ್ಲಿ ಬಿಡುಗಡೆಯಾಗುವ ಅನಿಲವನ್ನು ಹೆಸರಿಸಿ ?
   b. ಈ ಅನಿಲವನ್ನು ಸುಣ್ಣದ ತಿಳಿನೀರಿನ ಮೂಲಕ ಹಾಯಿಸಿದಾಗ ಉಂಟಾಗುವ ರಾಸಾಯನಿಕ ಕ್ರಿಯೆಯ ಸಮೀಕರಣ ಬರೆಯಿರಿ.
   c. ಈ ಕ್ರಿಯೆಯಲ್ಲಿ ದೊರೆಯುವ ಪ್ರಕ್ಷೇಪದ ಬಣ್ಣ ಯಾವುದು ?

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. 3X2=6


8. ಕಾರಣ ಬರೆಯಿರಿ.
   a. ಎರಡು ಕಾಂತೀಯ ಬಲ ರೇಖೆಗಳು ಒಂದನ್ನೊಂದು ಛೇದಿಸುವುದಿಲ್ಲ.
   b. ಲೋಹದ ಮೇಲ್ಮೈ ಹೊಂದಿರುವ ವಿದ್ಯುತ್ ಉಪಕರಣಗಳ ಸುರಕ್ಷತೆಗಾಗಿ ಭೂ ಸಂಪರ್ಕ ತಂತಿಯನ್ನು ಬಳಸುತ್ತಾರೆ.
9. ಸಾರರಿಕ್ತ ಸಲ್ಫ್ಯೂರಿಕ್ ಆಮ್ಲದೊಂದಿಗೆ ಸತುವಿನ ವರ್ತನೆ ಮತ್ತು ಉರಿಸುವಿಕೆಯ ಮೂಲಕ ಹೈಡ್ರೋಜನ್ ಅನಿಲ ಪರೀಕ್ಷಿಸುವ ಉಪಕರಣದ ಚಿತ್ರ ಬರೆದು ಭಾಗಗಳನ್ನು ಗುರುತಿಸಿ.
10. ಮಾನವನ ಮೆದುಳಿನ ನೀಲಛೇದ ನೋಟದ ಚಿತ್ರ ಬಿಡಿಸಿ ಯಾವುದಾದರೂ ಎರಡು ಭಾಗಗಳನ್ನು ಗುರುತಿಸಿ.

ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ. 1X4=4

7. ನಿಯಂತ್ರಣ ಮತ್ತು ಸಹಭಾಗಿತ್ವ ಕಾರ್ಯದಲ್ಲಿ ಈ ಹಾರ್ಮೋನುಗಳ ಪ್ರಾಮುಖ್ಯತೆಯನ್ನು ತಿಳಿಸಿ. a. ಆಕ್ಸಿನ್ b. ಆಬ್ಸಿಸಿಕ್ ಆಮ್ಲ c. ಅಡ್ರಿನಲಿನ್ d. ಇನ್ಸುಲಿನ್

ಸೂಚನೆ : ಈ ಮಾದರಿ ಪ್ರಶ್ನೆ ಪತ್ರಿಕೆಯನ್ನು ಉತ್ತರಿಸಿ ಹಾಗೂ ನಿಮ್ಮ ವಿಜ್ಞಾನ ಶಿಕ್ಷಕರಿಂದ ಪರಿಶೀಲಿಸಿಕೊಳ್ಳಿ.

**BEST OF LUCK**



ಮಾರ್ಗದರ್ಶಿ ಶಿಕ್ಷಕರು : ಶಿವತನಯ ಎಸ್.ಸಿ.. ವಿಜ್ಞಾನ ಶಿಕ್ಷಕರು, ಎಸ್.ಜಿ.ಬಿ.ಪ್ರೌಢಶಾಲೆ, ಬೆಣಕಲ್ಲು, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ )

**ಶ್ರೀಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ**

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055